©jagannathas1956@gmail.com
9972016425

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ
ಸಂಪುಟ ೮೯, ಸಂಚಿಕೆ ೦೩–೦೪
ಜುಲೈ–ಡಿಸೆಂಬರ್–೨೦೧೧

೧೩. ಆಲಂಕಾರಿಕರು ಕಂಡ ಮಹಾಭಾರತ

– ಎಸ್. ಜಗನ್ನಾಥ*

ಪ್ರಕೃತ ಲೇಖನವು ಐದು ವಿಭಾಗಗಳಲ್ಲಿ ಮೂಡಿಬಂದಿದೆ/ ೧. ಮಹಾಭಾರತದ ಗ್ರಂಥಪಾಠಗಳನ್ನಾಧರಿಸಿ ಆಲಂಕಾರಿಕರು ಕೊಟ್ಟಿರುವ ವಿಶ್ಲೇಷಣೆ; ೨. ಮಹಾಭಾರತದ ವಸ್ತುವನ್ನು ಆಶ್ರಯಿಸಿದ ಕಾವ್ಯಗಳ ಪದ್ಯಗಳು; ೩. ಮಹಾಭಾರತದ ವಸ್ತುವನ್ನು ಅವಲಂಬಿಸಿ ಕಾವ್ಯ ರಚಿಸುವುದರ ಬಗೆಗೆ ಭಾಮಹ ಹಾಗೂ ದಂಡಿಯರ ಸಲಹೆಗಳು; ೪. ಮಹಾಭಾರತದ ಘಟನೆಗಳನ್ನು ಆಶ್ರಯಿಸಿ ಪಂಡಿತರಾಜ ಜಗನ್ನಾಥನು ಪ್ರಾಸಂಗಿಕವಾಗಿ ರಚಿಸಿರುವ ಪದ್ಯಗಳು; ೫. ಆಲಂಕಾರಿಕರು ಮಹಾಭಾರತವನ್ನು ಕಂಡ ಬಗೆಗೆ ಪ್ರಕೃತ ಲೇಖಕನ ಅನ್ನಿಸಿಕೆ.

ಎರಡು, ಮೂರು ಹಾಗೂ ನಾಲ್ಕನೆಯ ವಿಭಾಗಗಳ ಬಗೆಗೆ ಒಂದು ಸ್ಪಷ್ಟೀಕರಣ ಆವಶ್ಯಕ. ಮಹಾಭಾರತದ ಘಟನೆಗಳನ್ನು ಆಧರಿಸಿ ರಚಿತವಾದ ಗದ್ಯ, ಪದ್ಯ, ಚಂಪೂ, ಸ್ತೋತ್ರ, ನಾಟಕ ಹಾಗೂ ಮುಕ್ತಕಗಳನ್ನು ಸಂಸ್ಕೃತದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಾಣಬಹುದಷ್ಟೆ. ಅವುಗಳೆಲ್ಲ ಲೇಖನದ ವ್ಯಾಪ್ತಿಗೆ ಹೊರಚ್ಚಾಗುವುದರಿಂದ ಅವುಗಳ ಸೇರ್ಪಡೆ ಇಲ್ಲಿ ಎಷ್ಟುಮಟ್ಟಿಗೆ ಸರಿ ಎಂಬ ಪ್ರಶ್ನೆಗೆ ಅವಕಾಶವಿದೆ. ಇದಕ್ಕೆ ಉತ್ತರವೆಂದರೆ, ಪ್ರಕೃತ ಲೇಖನವು ಮಹಾಭಾರತದ ಬಗೆಗೆ ಆಲಂಕಾರಿಕ ದೃಷ್ಟಿಕೋನದ ಉಲ್ಲೇಖವಾಗಿರುವುದರಿಂದ ಮಹಾಭಾರತವೆಂಬ ಶಬ್ದವು ಇಲ್ಲಿ ಮಹಾಭಾರತದ ವಾಸ್ತವಿಕ ಪದ್ಯಗಳ ಬಗೆಗೆ ಆಲಂಕಾರಿಕ ದೃಷ್ಟಿ ಹಾಗೂ ಮಹಾಭಾರತದ ಘಟನೆಗಳನ್ನು ಆಶ್ರಯಿಸಿ ಅವರು ಸ್ವಂತ ರಚಿಸಿರುವ ಪದ್ಯಗಳು ಹೀಗೆ ಎರಡು ಅರ್ಥಗಳನ್ನೂ ಒಳಗೊಳ್ಳುವುದು ಸಂಗತವಾಗುತ್ತವೆ.

I ಮಹಾಭಾರತದ ಗ್ರಂಥಪಾಠಗಳನ್ನಾಧರಿಸಿ ಆಲಂಕಾರಿಕರು ಕೊಟ್ಟಿರುವ ವಿಶ್ಲೇಷಣೆ.

ಈ ಭಾಗದಲ್ಲಿ ಮೂರು ಉಪವಿಭಾಗಗಳಿವೆ. ೧. ಮುಖ್ಯ ಕಥೆಯಲ್ಲೊಂದು ಭಾಗ; ೨. ಗೃಧ್ರಗೋಮಾಯುಸಂವಾದ; ೩. ಭಗವದ್ಗೀತೆ; ೪. ಗಜೇಂದ್ರ ಮೋಕ್ಷ; ೫. ಮೂಷಿಕೋಪಾಖ್ಯಾನ; ೬. ಮಹಾಭಾರತದ ಒಟ್ಟು ಕಥಾಹಂದರ.

ಪ್ರಾಚ್ಯವಸ್ತು ಸಂಶೋಧನಾಲಯ, ಕೌಟಿಲ್ಯ ವೃತ್ತ, ಮಹಾರಾಜ ಕಾಲೇಜಿನ ಹಿಂಬದಿ. ಮೈಸೂರು–೫

೧. ಮುಖ್ಯಕಥೆಯಲ್ಲೊಂದು ಭಾಗ

ದ್ರೋಣಪರ್ವದಲ್ಲಿ ಭೂರಿಶ್ರವಸನು ಮಡಿದಾಗ ಅವನ ಹೆಂಡಂದಿರು ಅಳುತ್ತಾ, "ನಮ್ಮೊಡನೆ ರತಿಯ ಬೇಟೆ ನಡೆಸಿದ ಕೈಯಿದು"[೧] ಎಂದು ಕತ್ತರಿಸಿಬಿದ್ದ ಅವನ ಕೈಯಿನ ಬಗೆಗೆ ನೆನೆಸಿಕೊಳ್ಳುತ್ತಾರೆ. ಶೋಕಾವೇಗದ ತೀವ್ರತೆಯು ಮನುಷ್ಯರನ್ನು ಅತಿರೇಕವಾಗಿ ಕಾಡಿದಾಗ ಆ ಕಾಡುವ ನೆನಪಿನಲ್ಲಿ ಲೌಕಿಕವಾದ ಸಭ್ಯ ಅಸಭ್ಯತ್ವಗಳ ಎಲ್ಲೆ ಎಲ್ಲಿಯೋ ಇಲ್ಲವಾಗುತ್ತದೆ. ಶೋಕಾಭಿವ್ಯಂಜನೆಯೇ ಅದರ ಪ್ರಧಾನ ಲಕ್ಷಣವಾಗಿ ಬಿಡುತ್ತದೆ. ಇಲ್ಲಿ ಶೃಂಗಾರವು ಕರುಣದ ಅಂಗವಾಗಿದ್ದು, ಕರುಣವೇ ಅಂಗಿಯಾದ ರಸವಾಗಿರುತ್ತದೆ. ಒಂದು ರಸಕ್ಕೆ ಮತ್ತೊಂದು ರಸವು ಅಂಗವಾಗುವುದರಿಂದ ಇದು ಗುಣೀಭೂತವ್ಯಂಗ್ಯಕ್ಕೆ ಉದಾಹರಣೆ. ವ್ಯಂಗ್ಯವಾದ ಶೃಂಗಾರವು ಸ್ವಪ್ರಧಾನವಾಗಿ ಇಲ್ಲಿ ಇಲ್ಲವಾಗಿರುವುದರಿಂದ ಇದನ್ನು ಧ್ವನಿಕಾವ್ಯವೆನ್ನಲಾಗದು. ಮತ್ತೊಂದು ಸಂಗತಿಯನ್ನಿಲ್ಲಿ ಸಂಕೇತವ್ಯಾಖ್ಯಾನಕಾರನು ಒಕ್ಕಣಿಸುತ್ತಾನೆ. ಅವನು ಹೇಳುವುದೇನೆಂದರೆ ಇಲ್ಲಿ ರಶನೋತ್ಕರ್ಷಣ, ನೀವಿವಿಸ್ರಂಸನ, ನಾಭ್ಯೂರುಜಘನಸ್ಪರ್ಶ ಹಾಗೂ ಪೀನಸ್ತನವಿಮರ್ದನ ಎಂಬುವು ಕ್ರಮವಾಗಿ ಉಲ್ಲೇಖನಯೋಗ್ಯವಾದ ಸಂಗತಿಗಳಾಗಬೇಕಾಗಿದ್ದಿತು. ಆದರೆ ಶೋಕಾರ್ತರ ಗೋಳಾಟವಿದಾಗಿರುವುದರಿಂದ ಕ್ರಮಭಂಗವಾಗಿದ್ದರೂ ಇದನ್ನು ದೋಷವೆನ್ನಲಾಗದು.[೨] ಇದಕ್ಕೆ ಹೇಮಚಂದ್ರನ ಸ್ಪಷ್ಟಡೆಯೇನೆಂದರೆ, ವಿಪ್ರಲಂಭಶೃಂಗಾರ ಹಾಗೂ ಕರುಣ ಇವುಗಳಲ್ಲಿ ವಿರೋಧ ಬಾರದಿರುವುದಕ್ಕೆ ಅವುಗಳಿಗೆ ಸಮಪ್ರಾಧಾನ್ಯ ಬರುವುದು ಒಂದು ಕಾರಣವಾದರೆ, ಅವುಗಳಲ್ಲಿ ಕರುಣವು ಅಂಗಿಯಾಗಿ ವಿಪ್ರಲಂಭವು ಅಂಗವಾಗಿರುವುದು ಮತ್ತೊಂದು ಕಾರಣ. ಇದರ ಜೊತೆಗೆ, ಸ್ವರೂಪತಃ ಕರುಣಶೃಂಗಾರಗಳಿಗೆ ವಿರೋಧವಿದ್ದಾಗ್ಯೂ ಹಿಂದೆ ನಡೆದಿದ್ದ ರತಿಘಟನೆಯು ವಿಘಟವಾಗಿರುವುದರಿಂದಾದ ವಿಪ್ರಲಂಭವು ತೀರಾ ಉತ್ಕಟವಾಗಿರುವ ಶೋಕವಿಭಾವವೇ ಆಗಲು ಸ್ಮರಣೆಯು ಕಾರಣವಾಗುತ್ತದೆ. ಹೀಗಾಗಿ ಕರುಣವು ಇಲ್ಲಿ ಶೃಂಗಾರದಿಂದಲೇ ಪೋಷಿತವಾಗಿ ಆ ಮುಖ್ಯಾರ್ಥವೇ ಪ್ರಬಲವಾಗುತ್ತದೆ. ಗೌಣಾರ್ಥವು ಸಂಸ್ಕರಣಕ್ಕೆ ಒಳಗಾದಾಗ ಪ್ರಧಾನಾರ್ಥದ ಆಕಾರವನ್ನು ಪಡೆದುಕೊಂಡು ಪ್ರಧಾನಾರ್ಥಕ್ಕೆ ಉಪಕಾರಕವೇ ಆಗಿ ವಿಶ್ರಮಿಸಿಬಿಡುತ್ತದೆ.[೩]

ಈ ಪ್ರಸಂಗದ ಬಗೆಗೆ ಸಾಹಿತ್ಯದರ್ಪಣವ್ಯಾಖ್ಯಾತೃ ಶಿವದತ್ತನ ವಿಶ್ಲೇಷಣೆ ಸ್ವಲ್ಪ ಭಿನ್ನವಾಗಿದೆ. "ಈ ಪದ್ಯವನ್ನು ಗುಣೀಭೂತವ್ಯಂಗ್ಯವೆಂದೇ ಕರೆಯಬೇಕೆಂಬ ನಿಯಮವೇನೂ ಇಲ್ಲ. ಕರುಣವನ್ನೇ ಪ್ರಧಾನವಾಗಿ ಹಿಡಿದಾಗ ಇದನ್ನು ಧ್ವನಿಯೆಂದೂ ಕರೆಯಬಹುದು" ಎಂಬುದು ಅವನ ಆಂಬೋಣ.[೪] ಆದರೆ ಈ ಅಭಿಪ್ರಾಯಕ್ಕೆ

ಸಮ್ಮತಿನೀಡುವುದು ಪ್ರಕೃತಲೇಖಕನಿಗೆ ಕಷ್ಟವಾಗುತ್ತದೆ. ಏಕೆಂದರೆ, ಒಂದೇ ಕಾವ್ಯವನ್ನು ಏಕಕಾಲದಲ್ಲಿ ಗುಣೀಭೂತವ್ಯಂಗ್ಯವೆಂದೂ ಧ್ವನಿಯೆಂದೂ ಕರೆಯಲು ಸಾಧ್ಯವಿಲ್ಲ. ದೃಷ್ಟಿಭೇದವೆಂಬ ಸಮರ್ಥನೆ ನೀಡುವುದಾದಲ್ಲಿ ವ್ಯಂಜನಾವ್ಯಾಪಾರಕ್ಕೆ ಪ್ರಾಧಾನ್ಯ ಅಲ್ಲಿಲ್ಲ ಎಂಬುದಕ್ಕೇ ಅದು ಸೂಚನೆಯಾಗುತ್ತದೆ. ಸ್ವಪ್ರಧಾನವಾಗಿ ವ್ಯಂಜನಾವ್ಯಾಪಾರವೊಂದೇ ತೋರುವಾಗ ಧ್ವನಿತ್ವ ಬರುತ್ತದೆಯೇ ಹೊರತು, 'ಒಂದು ದೃಷ್ಟಿಯಿಂದ ಶೃಂಗಾರಕ್ಕೆ ಪ್ರಾಧಾನ್ಯ, ಇನ್ನೊಂದು ದೃಷ್ಟಿಯಿಂದ ಕರುಣಕ್ಕೆ ಪ್ರಾಧಾನ್ಯ' ಎಂಬ ಪ್ರತಿಪಾದನೆಗೆ 'ವ್ಯಂಗ್ಯವಾದ ಶೃಂಗಾರರಸ ಗೌಣ'ವೆಂಬ ಅರ್ಥವೇ ಬರುತ್ತದೆ. ಹೀಗಾಗಿ ಪ್ರಕೃತಪದ್ಯ ಧ್ವನಿಕಾವ್ಯವಾಗುವುದು ಸಾಧ್ಯವೇ ಇಲ್ಲ. ಈ ಸಂದರ್ಭದಲ್ಲಿ ಸಾಹಿತ್ಯದರ್ಪಣದ ಸ್ಮರಣೆ ಎಂಬ ಶಬ್ದಕ್ಕೆ 'ಹಿಂದೆ ಅನುಭವಿಸಿದ್ದನ್ನು ವ್ಯಂಜನಾಮಾರ್ಗದ ಮೂಲಕ ತಿಳಿಯುವುದು' ಎಂದು ಅವನು ಅರ್ಥ ಮಾಡಿರುವುದು[೫] ವಿಚಿತ್ರವಾಗಿದೆ.

ಪೂರ್ವಾನುಭೂತವಾದದ್ದರ ಸ್ಮರಣೆಯು ಆಗಲು ನಾಯಿಕೆಗೆ ವ್ಯಂಜನಾ ವ್ಯಾಪಾರವೇತಕ್ಕೆ ಬೇಕು? ವ್ಯಂಜನಾವ್ಯಾಪಾರವು ಇಲ್ಲಿ ಬೇಕಾಗುವುದು ಸಹೃದಯರಿಗೆ.

೨. ಗೃಧ್ರಗೋಮಾಯು ಸಂವಾದ

ಪ್ರಬಂಧದಲ್ಲಿ ಅರ್ಥಶಕ್ತ್ಯುದ್ಭವಧ್ವನಿಗೆ ಗೃಧ್ರಗೋಮಾಯುಸಂವಾದವನ್ನು ಕಾವ್ಯಪ್ರಕಾಶ ಹಾಗೂ ಸಾಹಿತ್ಯದರ್ಪಣ ಎರಡರಲ್ಲೂ ಉದಾಹರಣೆಯಾಗಿ ನೀಡಲಾಗಿದೆ.[೬] ಇಲ್ಲೊಂದು ಕಥೆ. ಕಥೆ ತುಂಬ ಚಿಕ್ಕದು, ಆದರೆ ಉದ್ಬೋಧಪ್ರದ.

ಯಾರೋ ಒಬ್ಬ ಬ್ರಾಹ್ಮಣಬಾಲಕ ಮೃತನಾದ. ತಂದೆತಾಯಿಯರು ಅಳುತ್ತ ಅವನ ಶವವನ್ನು ಶ್ಮಶಾನಕ್ಕೆ ಒಯ್ದರು. ಅಲ್ಲಿ ಅವರು ದುಃಖಿಸುತ್ತಿದ್ದಾಗ, "ದಾಹಸಂಸ್ಕಾರ ನಡೆಸಿ ಬೇಗ ಹೊರಡಿರಿ. ಸತ್ತವರು ಎಲ್ಲಾದರೂ ಬದುಕುತ್ತಾರೆಯೆ?" ಎಂದು ಹದ್ದೊಂದು ಗದರಿಸಿತು. ಅಲ್ಲೇ ಇದ್ದ ನರಿಯೊಂದು, "ಇಂಥ ಮುದ್ದು ಮಗನನ್ನು ಬಿಟ್ಟು ಹೋಗಲು ನಿಮಗೆ ಮನಸ್ಸಾದರೂ ಹೇಗೆ ಬರುತ್ತದೆ? ಅಘಟಿತಘಟನೆಗಳು ಪ್ರಪಂಚದಲ್ಲಿ ನಡೆಯುವುದಿಲ್ಲವೆ? ಇವನು ಬದುಕಿದರೂ ಬದುಕಬಹುದು" ಎಂದು ಉಪದೇಶಿಸಲಾರಂಭಿಸಿತು. 'ಕತ್ತಲೆಯಾಗಿಬಿಟ್ಟರೆ ಕಣ್ಣು ಸರಿಯಾಗಿ ಕಾಣಿಸದೆ ಶವದ ಮಾಂಸವನ್ನು ತಿನ್ನಲಾಗುವುದಿಲ್ಲ. ಹೀಗಾಗಿ ಈ ಬಂಧುಗಳನ್ನು ಈಗಲೇ ಇಲ್ಲಿಂದ ಹೊರಡಿಸಿ ಶವವನ್ನು ತೊಂದರೆಯಿಲ್ಲದೆ ಭಕ್ಷಿಸಬಹುದು' ಎಂಬುದು ಹದ್ದಿನ ಯೋಚನೆ. 'ಹೇಗಾದರೂ ಇವರನ್ನು ರಾತ್ರಿಯವರೆಗೆ ತಡೆದು ಅನಂತರ ಹೊರಡಿಸಿದರೆ, ಹದ್ದಿನ ಕಾಟವಿಲ್ಲದೆ ರಾತ್ರಿಯಲ್ಲಿ ನಾನೊಬ್ಬನೇ ಶವವನ್ನು ಭಕ್ಷಿಸಬಹುದು' ಎಂಬುದು ನರಿಯ ಭಾವನೆ. ಹೀಗಾಗಿ

ಅವರೆರಡೂ ತತ್ತ್ವೋಪದೇಶಕರ ಸೋಗು ಹಾಕುತ್ತ ಬಂಧುಗಳಿಗೆ ಸಲಹೆ ನೀಡುತ್ತಿದ್ದವು.

ಇಲ್ಲಿ ಗೃಧ್ರ ಮತ್ತು ಗೋಮಾಯು ಇವೆರಡರ ಶವಭಕ್ಷಣಾಭಿಪ್ರಾಯವೇ ವ್ಯಂಗ್ಯ. 'ಬೇಗ ಇಲ್ಲಿಂದ ಹೊರಡಿರಿ' ಎಂಬ ಗೃಧ್ರವಾಕ್ಯರೂಪವಾದ ಸ್ವತಃಸಂಭವಿ ವಸ್ತುವಿನಿಂದ 'ಇವರೆಲ್ಲ ಬೇಗ ಹೊರಟುಹೋದಲ್ಲಿ ಸೂರ್ಯಾಸ್ತಕ್ಕೆ ಮೊದಲೇ ಶವಭಕ್ಷಣಕ್ಕೆ ನನಗೆ ಅನುಕೂಲ' ಎಂಬ ವಸ್ತು ವ್ಯಂಗ್ಯವಾಗುತ್ತದೆ. ಹಾಗೆಯೇ 'ರಾತ್ರಿಯವರೆಗೆ ತಡೆಯಿರಿ' ಎಂಬ ಗೋಮಾಯುವಾಕ್ಯರೂಪವಾದ ಸ್ವತಃಸಂಭವಿ ವಸ್ತುವಿನಿಂದ 'ಇವರನ್ನು ರಾತ್ರಿಯವರೆಗೆ ತಡೆದಲ್ಲಿ ಸೂರ್ಯಾಸ್ತದ ಅನಂತರ ಯಾವ ತೊಂದರೆಯಿಲ್ಲದೆ ಶವವನ್ನು ಭಕ್ಷಿಸಬಹುದು' ಎಂಬ ವಸ್ತು ವ್ಯಂಗ್ಯವಾಗುತ್ತದೆ.

೩. ಭಗವದ್ಗೀತೆ

ಪ್ರಸಿದ್ಧ ಆಲಂಕಾರಿಕರಾರೂ ಭಗವದ್ಗೀತೆಯ ಧ್ವನಿಯನ್ನು ವಿಶ್ಲೇಷಣೆಗೆ ತೆಗೆದುಕೊಂಡಂತೆ ಕಾಣಿಸಲಿಲ್ಲ. ಆದರೆ ಸಾಹಿತ್ಯದರ್ಪಣದ ವ್ಯಾಖ್ಯಾಕಾರ ಶಿವದತ್ತನೊಬ್ಬನು ಮಾತ್ರ ಕಾವ್ಯಶಾಸ್ತ್ರದೃಷ್ಟಿಯಿಂದ ಭಗವದ್ಗೀತೆಯ ಬಗೆಗೆ ಕೆಲವು ನೋಟಗಳನ್ನು ಕೊಟ್ಟಿದ್ದಾನೆ.[೬] ಅವನ ಅಭಿಪ್ರಾಯದ ಸಾರವೇನೆಂದರೆ :

ಭಗವದ್ಗೀತೆಯು ಕವಿನಿಬದ್ಧಪ್ರೌಢೋಕ್ತಿಸಿದ್ಧವಸ್ತುನಾ ವಸ್ತುಧ್ವನಿಗೆ ಸೊಗಸಾದ ಉದಾಹರಣೆಯಾಗಬಲ್ಲದು. ಅರ್ಜುನ ಶ್ರೀಕೃಷ್ಣನಿಗೆ ಹೇಳಿದ್ದೇನು? "ಇವರೆಲ್ಲ ನನ್ನ ಮಿತ್ರರು ಇವರನ್ನೇ ಹೇಗೆ ಕೊಲ್ಲಲಿ" ಎಂದು ತಾನೆ? ಇದಕ್ಕೆ ಉತ್ತರವಾಗಿ ಭಗವಾನನು "ಯಾರೂ ಯಾರಿಗೂ ಮಿತ್ರರಲ್ಲ, ಯಾರೂ ಕೊಲ್ಲುವವರೂ ಇಲ್ಲ, ಕೊಲೆಗೆ ಯೋಗ್ಯರಾದವರೂ ಇಲ್ಲ" ಎಂದನಷ್ಟೆ. ಇಲ್ಲಿ ಭಗವದರ್ಜುನಸಂವಾದ ಕವಿನಿಬದ್ಧ. ಗಾಂಡೀವವು ಕೈಯಿಂದ ಜಾರಿಬೀಳುವುದು, ಚರ್ಮ ಸುಟ್ಟು ಹೋಗುವಂತಿರುವುದು, ಕೌರವರನ್ನು ಕೊಲ್ಲುವುದರಲ್ಲಿ ಸಂತೋಷವಂತೂ ಏನೂ ಇಲ್ಲದಿರುವುದು, ಪಾಪ ಸುತ್ತಿಕೊಳ್ಳುವುದು, ಇದನ್ನೆಲ್ಲ ಅವನು ಹೇಳಿದನಷ್ಟೆ. ಇದಕ್ಕೆ ಉತ್ತರವಾಗಿ ಭಗವಾನ ಶ್ರೀಕೃಷ್ಣನು "ಸಂಕಟಸಮಯದಲ್ಲಿ ಈ ತರಹದ ಬುದ್ಧಿಮಾಲಿನ್ಯ ನಿನಗೆ ಬಂದಿದ್ದೇಕೆ? ಶೋಕಕ್ಕೆ ಯೋಗ್ಯರೇ ಅಲ್ಲದವರ ಬಗೆಗೆ ಶೋಕಿಸುತ್ತಿರುವುದರ ಕಾರಣವಾದರೂ ಏನು? ಆತ್ಮಕ್ಕೆ ವಾಸ್ತವಿಕವಾದ ಹನನವೆಂಬುದು ಸಂಭವಿಸುವುದೇ ಇಲ್ಲ" ಎಂದಿದ್ದೆಲ್ಲ ಪ್ರೌಢೋಕ್ತಿಯೆಂಬ ವರ್ಗಕ್ಕೆ ಸೇರುತ್ತವೆ. ಇದರಿಂದ ಹೊರಡುವ ಧ್ವನಿಯೆಂದರೆ, 'ಮಿತ್ರರ ಅಥವಾ ಅಪಕಾರಿಗಳ ಕೊಲೆಯಿಂದ ದುಃಸಹವಾದ ಶೋಕವು ಉಂಟಾಗುವುದು ಎನ್ನುವುದು ಕೇವಲ ಅಜ್ಞಾನದಿಂದ' ಎಂಬ ವಸ್ತು ಪ್ರಬಂಧದಿಂದ ಅಭಿವ್ಯಂಜಿತವಾಗುತ್ತದೆ.

ಭಗವದ್ಗೀತೆಯಂತಹ ಪ್ರಾಸಾದಿಕ ಗ್ರಂಥದಲ್ಲೂ ಧ್ವನಿಯನ್ನು ಪತ್ತೆ ಮಾಡುತ್ತೇನೆಂಬ ಭರದಲ್ಲಿ ಶಿವದತ್ತನು ಆತುರಪಟ್ಟಿರುವುದು ಇಲ್ಲಿ ಸ್ಪಷ್ಟವಾಗಿದೆ. ಅವನು ಧ್ವನಿಯೆಂದು ಹೇಳುವುದು ಭಗವದ್ಗೀತೆಯಲ್ಲಿ ಅಭಿಧಾಮಾರ್ಗದಿಂದ ಅತಿ ಸ್ಪಷ್ಟವಾಗಿ ಉಕ್ತವಾಗಿಯೇ ಇದೆ.[೮] ಶಾಸ್ತ್ರಗ್ರಂಥಗಳಲ್ಲಿ ಗೋಚರಿಸುವ ವ್ಯಾಪಾರವೆಂದರೆ, ಅಭಿಧಾ ಅಥವಾ ಲಕ್ಷಣಾ ಮಾತ್ರ. ವ್ಯಂಜನಾವ್ಯಾಪಾರವು ಶಾಸ್ತ್ರಕ್ಕೆ ಹೊರಚ್ಚಾದದ್ದೆಂಬ ಪ್ರಾಥಮಿಕ ವಿಚಾರವನ್ನು ಸಹಾ ಅವನು ಗಮನಿಸದಿರುವುದು ವಿಚಿತ್ರ.

೪. ಗಜೇಂದ್ರಮೋಕ್ಷ

ಶಾಸ್ತ್ರಕ್ಕೆ = ಶಾಸ್ತ್ರವಾಕ್ಯಗಳಿಗೆ

ಆದರೆ, ಗಜೇಂದ್ರಮೋಕ್ಷದ ಬಗೆಗೆ ಅವನು ಹೇಳುವುದು ಸರಿಯಾಗಿದೆ. ದೇವಲಶಾಪದಿಂದ ಆನೆಯಾಗಿಯೂ ಮೊಸಳೆಯಾಗಿಯೂ ಹುಟ್ಟಿದ ಕಥೆಯ ಪ್ರಸ್ತಾವ ಮಾಡಿದ್ದು ಭೀಷ್ಮ. ಮಹಾತ್ಮರಿಗೆ ಯಾವ ರೀತಿಯಿಂದಲಾದರೂ ತಿರಸ್ಕಾರ ತೋರಿಸಿದವರು ಎಂದಿಗೂ ಏಳ್ಗೆಯನ್ನು ಹೊಂದುವುದಿಲ್ಲ, ಗಂಧರ್ವರಾಜರು ಹೇಗೋ ಹಾಗೆ ಎಂಬ ಉಪಮಾ ಧ್ವನಿಸುತ್ತದೆ. ಹೀಗಾಗಿ ಇಲ್ಲಿ ವಸ್ತುವಿನಿಂದ ಅಲಂಕಾರಧ್ವನಿ.[೯] ಪಂಡಿತರಾಜ ಜಗನ್ನಾಥನು ಹೇಳಿರುವ ಉದಾಹರಣಾಲಂಕಾರವನ್ನು ಗಮನಿಸಿದ್ದರೆ ಶಿವದತ್ತನು ಇಲ್ಲಿ ಧ್ವನಿತವಾಗುವುದು ಉದಾಹರಣಾಲಂಕಾರ ವೆನ್ನುತ್ತಿದ್ದನೋ ಏನೋ!

೫. ಮೂಷಿಕೋಪಾಖ್ಯಾನ

ಮಹಾಭಾರತದಲ್ಲಿನ ಮೂಷಿಕೋಪಾಖ್ಯಾನದಲ್ಲಿ ಅಲಂಕಾರದಿಂದ ವಸ್ತುಧ್ವನಿಯನ್ನು ಶಿವದತ್ತನು ಕಂಡುಕೊಂಡಿದ್ದಾನೆ.[೧೦] ಲಘುಮನಸ್ಕನು ಉನ್ನತಪದವಿಯನ್ನು ಪಡೆದರೆ ಏನಾಗುತ್ತದೆ ಎಂಬುದು ಯುಧಿಷ್ಠಿರನ ಪ್ರಶ್ನೆ. ಲಘುವಾದ ಮೂಷಿಕವು ಮುನಿಯ ಕೃಪೆಯಿಂದ ಹಲವಾರು ಆಕಾರಗಳನ್ನು ತಳೆಯುತ್ತ ಕೊನೆಗೆ ಸಿಂಹವಾಯಿತು. ಅಂತ್ಯದಲ್ಲಿ ಮುನಿಯ ಕೋಪಕ್ಕೆ ಗುರಿಯಾಗಿ ಮತ್ತೊಮ್ಮೆ ಮೂಷಿಕವೇ ಆಯಿತು. ಈ ಉಪಮೆಯಿಂದ, ಲಘುಮನಸ್ಕನು ಮಹತ್ತಾದ ಪದವಿಯನ್ನು ಪಡೆದಲ್ಲಿ ಕೊನೆಗೆ ಪ್ರಮಾದದಿಂದ ಲಘುವೇ ಆಗುತ್ತಾನೆ. ಆದ್ದರಿಂದ ಪ್ರಮಾದವನ್ನು ಯಾವುದೇ ಕಾರಣಕ್ಕೂ ಮಾಡಕೂಡದು ಎಂಬ ವಸ್ತು ವ್ಯಜ್ಯಮಾನವಾಗುತ್ತದೆ.

೬. ಮಹಾಭಾರತದ ಒಟ್ಟು ಕಥಾಹಂದರ

ಮಹಾಭಾರತದ ಒಟ್ಟು ಕಥಾಹಂದರದ ಸುಗ್ರಾಹ್ಯವೂ ಖಚಿತವೂ ಆದ ಆಲಂಕಾರಿಕ ವಿಶ್ಲೇಷಣೆಯನ್ನು ಕೊಟ್ಟಿರುವ ಏಕೈಕ ಆಲಂಕಾರಿಕನೆಂದರೆ ಆನಂದವರ್ಧನ.[೧೧] ಅವನ ವಿಚಾರಗಳನ್ನು ಹೀಗೆ ಅನುವಾದಿಸಬಹುದು:

ಕಾವ್ಯಪ್ರಪಂಚದಲ್ಲಿ ವ್ಯಂಗ್ಯವ್ಯಂಜಕಭಾವಗಳು ಹಲವಾರು ಬಗೆಗಳಲ್ಲಿ ಸಂಭವಿಸುತ್ತವೆ. ಆದರೆ ಕವಿಯು ರಸಾದಿಮಯವ್ಯಂಗ್ಯಕ್ಕೆ ಪ್ರಾಧಾನ್ಯ ನೀಡಬೇಕು. ಏಕೆಂದರೆ, ಅಪೂರ್ವವಸ್ತುಲಾಭದ ಪ್ರಯೋಜನ ಕವಿಗೆ ಆಗುವುದು, ಶೀಘ್ರಗಮನವನ್ನು ಹರಿಸಲು ರಸಾದಿಗಳನ್ನು ಆಯ್ಕೆ ಮಾಡಿಕೊಂಡಾಗಲೇ. ಇಲ್ಲಿ ರಸಾದಿ ಎನ್ನುವಾಗ ಆದಿ ಪದದಿಂದ ರಸ, ಭಾವ, ರಸಾಭಾಸ ಈ ಎಲ್ಲವುಗಳನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಇದು ವರ್ಣ, ಪದ, ವಾಕ್ಯ, ಪ್ರಬಂಧ ಈ ಎಲ್ಲಕ್ಕೂ ಅನ್ವಯಿಸುವಂಥದ್ದು. ರಾಮಾಯಣ ಮಾಹಾಭಾರತಾದಿಗಳಲ್ಲಿ ಯುದ್ಧ ಮುಂತಾದ ವರ್ಣನೆಗಳು ಮತ್ತೆ ಮತ್ತೆ ಬಂದಿದ್ದಾಗ್ಯೂ ಪ್ರತಿಸಲವೂ ಅವುಗಳು ಹೊಸದಾಗಿ ಅನುಭವಕ್ಕೆ ಬರುತ್ತವೆ. ಈ ಪ್ರಬಂಧಗಳಲ್ಲಿ (ಇಲ್ಲಿ ಪ್ರಬಂಧವೆಂದರೆ ವಾಕ್ಯಗಳ ಸರಣಿಯಿರುವ ಬೃಹತ್ ಸಾಹಿತ್ಯ) ಒಂದೇ ಮುಖ್ಯರಸವನ್ನು ಪ್ರತಿಪಾದಿಸಿದಾಗ ಅದರ ಕಾಂತಿ ಹೆಚ್ಚುತ್ತದೆ. ಇದಕ್ಕೆ ಉದಾಹರಣೆ ರಾಮಾಯಣ ಮಹಾಭಾರತಗಳೇ. ಮಹಾಭಾರತವು ತತ್ತ್ವಶಾಸ್ತ್ರದ ಛಾಯೆಯುಳ್ಳದ್ದು. ಇದರ ಸಮಾಪ್ತಿಯು ವೃಷ್ಣಿಪಾಂಡವರ ವಿರಸವನ್ನು ಕೊನೆಯಲ್ಲಿ ಹೊಂದಿರತಕ್ಕದ್ದು. ಇದರ ತಾತ್ಪರ್ಯ ವೈರಾಗ್ಯವೇ. ಇದನ್ನು ಕಟ್ಟಿಕೊಟ್ಟಿರುವ ಮಹಾಮುನಿ ವ್ಯಾಸನು ತನ್ನ ಮಹಾಸಾಹಿತ್ಯದಲ್ಲಿ ಪ್ರಧಾನವಾಗಿ ಮೋಕ್ಷವೆಂಬುದೇ ಪರಮಪುರುಷಾರ್ಥವೆಂದೂ ಶಾಂತರಸವೇ ಅಂಗಿ ಎಂದೂ ಸೂಚಿಸಿದ್ದಾನೆ. ಈ ಮಾತನ್ನು ವ್ಯಾಖ್ಯಾತೃಗಳೂ ಸಹ ಹೇಳಿದ್ದಾರೆ. ಇದರ ಜೊತೆಗೆ, ಮಹಾಮೋಹದಲ್ಲಿ ಮಗ್ನರಾದ ಜನರನ್ನು ಮೇಲಕ್ಕೆತ್ತುವ ಉದ್ದೇಶದಿಂದ ಅವತಾರವೆತ್ತಿ ಶುದ್ಧಜ್ಞಾನದ ಬೆಳಕನ್ನು ನೀಡುವ ಸ್ವಯಂ ಭಗವಾನನೂ ಸಹ ಇದನ್ನು ಅನೇಕಬಾರಿ ಹೇಳಿಯೇ ಇದ್ದಾನೆ. ಉದಾಹರಣೆಗೆ ಈ ಮಾತು ನೋಡಬಹುದು : ಲೌಕಿಕ ವಿಚಾರಗಳಿಗೆ ಪ್ರಾಧಾನ್ಯ ಕೊಡುವುದು ನಿಃಸಾರವೆಂಬ ಅರಿವಿನಿಂದ ಅದರ ಬಗೆಗೆ ಇಟ್ಟಿರುವ ನಂಬಿಕೆ ತಲೆಕೆಳಗಾಗುತ್ತಿದ್ದಂತೆಯೇ ವೈರಾಗ್ಯವು ಕ್ರಮವಾಗಿ ಬರುತ್ತದೆ. ಇಲ್ಲಿರುವ ಶಾಂತರಸವು ಬೇರೆ ರಸಗಳಿಂದ ವ್ಯಂಗ್ಯವಾಗುವುದು, ಮೋಕ್ಷವೆಂಬ ಪುರುಷಾರ್ಥವು ಬೇರ ಪುರುಷಾರ್ಥಗಳಿಂದ ವ್ಯಂಗ್ಯವಾಗುವುದು ಸ್ಪಷ್ಟವಾಗಿಯೇ ಸಹೃದಯರಿಗೆ ಗೊತ್ತಾಗುತ್ತದೆ. ಇವೆರಡೂ ಅತ್ಯಂತ ರಮಣೀಯವಾಗಿ ಪ್ರತಿಪಾದಿತವಾಗಿರುವುದೂ ಸಹ ಮಹಾಭಾರತದ ರಚನೆಯ ಉದ್ದೇಶಕ್ಕೆ ಹೊಂದಿಕೊಂಡೇ ಇದೆ.

ಇಲ್ಲೊಂದು ಆಕ್ಷೇಪವನ್ನು ಯಾರಾದರೂ ಎಬ್ಬಿಸಬಹುದು. ಕವಿಯು ಯಾವುದಾದರೊಂದು ವಿಚಾರವನ್ನು ಸ್ವಯಂ ಹೇಳಿದ್ದಲ್ಲಿ ಅದು ಶುದ್ಧವ್ಯಂಗ್ಯ (ಅರ್ಥಾತ್ ಧ್ವನಿ)ವಾಗದೇ ಗುಣೀಭೂತವ್ಯಂಗ್ಯ ಆಗುತ್ತದಷ್ಟೆ. ಮಹಾಭಾರತದ ಪ್ರಾರಂಭದಲ್ಲಿ ಬರುವ ಅನುಕ್ರಮಣಿಕಾ ಭಾಗದಲ್ಲಿ ಸಕಲಪುರುಷಾರ್ಥಗಳ ಜ್ಞಾನಕ್ಕೂ

ಮಹಾಭಾರತದ ಪತನ ಕಾರಣವೆಂದೂ ಸಕಲ ರಸಗಳೂ ಮಹಾಭಾರತದಲ್ಲಿ ಇವೆಯೆಂದೂ ಸ್ವಯಂ ಮುನಿಯೇ ಹೇಳಿರುವಾಗ ಶಾಂತರಸವು ಇಲ್ಲಿ ವ್ಯಂಗ್ಯವೆಂದು ಹೇಗೆ ಹೇಳುವುದು? ಇದೇನೂ ಅಂಥ ದೊಡ್ಡ ಸಮಸ್ಯೆಯಲ್ಲ. ಶಾಂತರಸವೇ ಪ್ರಧಾನ, ಮೋಕ್ಷವೆಂಬ ಪುರುಷಾರ್ಥವೇ ಬೇರೆ ಪುರುಷಾರ್ಥಗಳಿಗಿಂತ ಮಿಗಿಲಾದದ್ದು ಎಂದು ಅನುಕ್ರಮಣಿಯಲ್ಲಿ ತೋರಿಸಿರುವುದು ವಾಚ್ಯವಾಗಿ ಅಲ್ಲ, ವ್ಯಂಗ್ಯವಾಗಿ. **ಭಗವಾನ್ ವಾಸುದೇವಶ್ಚ ಕೀರ್ತ್ಯತೇತ್ರ ಸನಾತನಃ** ಎಂಬ ಮಾತಿನಲ್ಲಿ ಈ ಅರ್ಥವು ಬಂದಿರುವುದು ವ್ಯಂಗ್ಯವಾಗಿಯೇ. ಮಹಾಭಾರತದಲ್ಲಿ ಪಾಂಡವ ಮುಂತಾದವರ ಚರಿತ್ರವನ್ನು ಹೇಳಿದ್ದೇವಷ್ಟೆ. ಆದ್ದರಿಂದ ಯಾವಾಗಲೂ ಪರಮಾತ್ಮನಲ್ಲಿಯೇ ಮನಸ್ಸನ್ನು ನೆಟ್ಟಿರಿ, ನಿಃಸಾರವಾದ ವೈಭವಗಳಲ್ಲೋ ಅಥವಾ ಸದ್ಗುಣಗಳಂತೆ ಭಾಸವಾಗುವ ಲೌಕಿಕ ಗುಣಗಳಲ್ಲಿ ಏನೂ ಉಪಾದೇಯವಾದದ್ದು ಇಲ್ಲ. ಜನ್ಮ ಮರಣರೂಪಸಂಸಾರವು ಅತಿನೀರಸ ಎಂಬ ಅರ್ಥ ಸ್ಪಷ್ಟವಾಗಿಯೇ ಗೋಚರವಾಗುತ್ತದೆ. ಇದಲ್ಲದೆ, ಈ ಅರ್ಥವನ್ನೇ ಪ್ರತಿಪಾದಿಸುವ ಶ್ಲೋಕಗಳು ಮುಂದೆಯೂ ಸಹ ಬಂದಿವೆ. **ಸ ಹಿ ಸತ್ಯಮೃತಂ ಚೈವ ಪವಿತ್ರಂ ಪುಣ್ಯಮೇವ ಚ. ಶಾಶ್ವತಂ ಬ್ರಹ್ಮ ಪರಮಂ ಧ್ರುವಂ ಜ್ಯೋತಿಃ ಸನಾತನಮ್**. ಹರಿವಂಶ ವರ್ಣನೆಯಿಂದ ಮಹಾಭಾರತದ ಸಮಾಪ್ತಿಯನ್ನು ಮಾಡಿರುವ ಕವಿಬ್ರಹ್ಮ ಕೃಷ್ಣದ್ವೈಪಾಯನನು ಸ್ಪಷ್ಟೀಕರಿಸಿರುವುದು ಸುಂದರವಾದ ಈ ವ್ಯಂಗ್ಯಾರ್ಥವನ್ನೇ. ಸಂಸಾರಕ್ಕಿಂತ ಮೀರಿದ ಮತ್ತೊಂದು ತತ್ವವಿದೆಯೆಂದೂ ಅದರಲ್ಲಿ ಭಕ್ತ್ಯತಿಶಯವನ್ನು ತೋರಿಸಬೇಕೆಂದೂ ಸಾಂಸಾರಿಕ ವ್ಯವಹಾರವೆಲ್ಲ ಕೇವಲ ಪೂರ್ವಪಕ್ಷವೆಂದೂ ಇದರಿಂದ ಹೇಳಿದಂತಾಯಿತು. ದೇವತಾತೀರ್ಥ ತಪಸ್ಸು ಇವುಗಳ ಪ್ರಭಾವಾತಿಶಯವನ್ನು ವರ್ಣನೆ ಮಾಡಿರುವುದು, ಆ ಪರಬ್ರಹ್ಮನ ಪ್ರಾಪ್ತಿಯ ಉಪಾಯವನ್ನು ತೋರಿಸಲಿಕ್ಕೇ ಆಗಿರುತ್ತದೆ. ಪಾಂಡವಾದಿ ಚರಿತೆಯ ವರ್ಣನೆಯು ಮೂಲತಃ ವೈರಾಗ್ಯವನ್ನುಂಟು ಮಾಡುವುದಕ್ಕೇ ಬಂದಿದೆ. ವೈರಾಗ್ಯವೇ ಮೋಕ್ಷಕ್ಕೆ ಮೂಲಕಾರಣ. ಮಹಾಭಾರತದಲ್ಲಿ ಬರುವ ಭಗವದ್ಗೀತೆ ಮುಂತಾದ ಆಧ್ಯಾತ್ಮಿಕ ಶಾಸ್ತ್ರ ಭಾಗಗಳಲ್ಲಿ ಭಗವಂತನ ಪ್ರಾಪ್ತಿಗೆ ಮೋಕ್ಷವೇ ಕಾರಣವೆಂದು ತೋರಿಸಲಾಗಿದೆ. ಇದೆಲ್ಲ ಒಟ್ಟು ತಾತ್ಪರ್ಯದಿಂದ ಪರಬ್ರಹ್ಮ ಪ್ರಾಪ್ತ್ಯುಪಾಯವೇ. ವಾಸುದೇವನೆಂಬ ಹೆಸರಿನ ಅಪರಿಮಿತಶಕ್ತಿಯುಕ್ತವಾದ ಪರಬ್ರಹ್ಮವು ಮಥುರಾನಗರದಲ್ಲಿ ಜನ್ಮ ತಾಳಿತೆಂದು ಹೇಳಿರುವುದು, ಸಕಲವಿಧ ಸ್ವರೂಪಾನುಕರಣೆಯನ್ನೂ ತಿಳಿಸಲು, ಕೇವಲ ಕೃಷ್ಣಜನನವನ್ನು ತಿಳಿಸಲೆಂದೇನೂ ಅಲ್ಲ. ಹಿಂದೆ ಉಲ್ಲೇಖಿಸಿರುವ ಪದ್ಯದಲ್ಲಿ ಬಂದಿರುವ ಸನಾತನ ಎಂಬ ಶಬ್ದವನ್ನು ಗಮನವಿಟ್ಟು ನೋಡಿದಲ್ಲಿ ಈ ಅರ್ಥ ಚೆನ್ನಾಗಿ ಅರಿವಾಗುತ್ತದೆ. ಭಗವಂತನಿಗಿಂತ

ಭಿನ್ನವಾದದ್ದೆಲ್ಲವೂ ಅನಿತ್ಯ ಎಂದು ಪ್ರಕಟಪಡಿಸುತ್ತಾ ಮೋಕ್ಷವೆಂಬ ಪುರುಷಾರ್ಥವೊಂದೇ ಪ್ರಧಾನ ಎಂಬುದು ಶಾಸ್ತ್ರದೃಷ್ಟಿಯಿಂದ ಮಹಾಭಾರತವನ್ನು ನೋಡುವಾಗ ಗೊತ್ತಾಗುವಂಥದ್ದು. ಕಾವ್ಯದೃಷ್ಟಿಯಿಂದ ನೋಡುವಾಗ ತೃಷ್ಣಾಕ್ಷಯರೂಪವಾದ ಸುಖವನ್ನು ಪರಿಪೋಷಿಸುವ ಶಾಂತವೇ ಮಹಾಭಾರತದ ಮುಖ್ಯರಸ ಎಂದು ಸ್ಪಷ್ಟವಾಗಿಯೇ ಪ್ರತಿಪಾದನೆ ಮಾಡಬಹುದು.

II. ಮಹಾಭಾರತದ ವಸ್ತುವನ್ನು ಆಶ್ರಯಿಸಿದ ಕಾವ್ಯಗಳ ಪದ್ಯಗಳು

ಭಾಮಹನು ಮಹಾಭಾರತವನ್ನು ವಸ್ತುವಾಗುಳ್ಳ **ರತ್ನಾಹರಣ**ವೆಂಬ ಕಾವ್ಯದಲ್ಲಿನ ಒಂದು ಪ್ರಸಂಗದ ಬಗೆಗೆ (ಈಗ ಅನುಪಲಬ್ಧ) ಹೀಗೆ ಒಕ್ಕಣಿಸುತ್ತಾನೆ: **"ಯಾವ ಅನ್ನವನ್ನು ಶ್ರೋತ್ರಿಯರಾದ ಬ್ರಾಹ್ಮಣರು ಉಂಡಾಗಿಲ್ಲವೋ ಅದನ್ನು ಮನೆಯಲ್ಲಾಗಲೀ ಮಾರ್ಗದಲ್ಲಿಯಾಗಲೀ ಉಣ್ಣುವುದಿಲ್ಲ"** ಎಂದು ಕೃಷ್ಣನು ಜರಾಸಂಧನಿಗೆ ಹೇಳುವುದು. ಅವನು ಊಟದಲ್ಲಿ ವಿಷ ಬೆರೆಸಿರಬಹುದೆಂಬ ಸಂಶಯದಿಂದ.[೧೨] ಈ ಪ್ರಸಂಗ ಸರಿಯಾಗಿ ಅರ್ಥವಾಗುತ್ತಿಲ್ಲ. ಏಕೆಂದರೆ, ಸಂಸ್ಕೃತ ವ್ಯಾಕರಣದ ಪ್ರಕಾರ ಕೃಷ್ಣ ಎಂಬ ಅರ್ಥ ಬರಲು ಶಾರ್ಙ್ಗಧನ್ವಾ ಎಂಬ ಶಬ್ದವಿರಬೇಕಾಗಿತ್ತು, ಶಾರ್ಙ್ಗಧನು ಎಂದಲ್ಲ. ರತ್ನಾಹರಣ ಕಾವ್ಯ ಸಿಕ್ಕಿಲ್ಲವಾದ್ದರಿಂದ ಇದರ ಬಗೆಗೆ ಹೆಚ್ಚಿನ ವಿಮರ್ಶೆ ನಡೆಸುವುದು ಸಾಧ್ಯವಿಲ್ಲವಾಗಿದೆ. ಇದರ ಬಗೆಗೆ ಅಭಿನವಗುಪ್ತನ **ನ ಚಾಸ್ಯ ರಸದಾನನಿಷೇಧಸ್ಯ ವ್ಯಂಗ್ಯಸ್ಯ ಕಿಂಚಿಚ್ಚಾರುತ್ವಮಸ್ತಿ ಯೇನ ಪ್ರಾಧಾನ್ಯಂ ಶಂಕ್ಯೇತ** ಇತ್ಯಾದಿ ವಾಕ್ಯಗಳಲ್ಲಿ ಕಂಡುಬರುವ ಅಭಿಪ್ರಾಯವನ್ನು ದಿ. ಡಾ. ಕೆ. ಕೃಷ್ಣಮೂರ್ತಿಯವರು ಹೀಗೆ ವಿಶ್ಲೇಷಿಸಿದ್ದಾರೆ.[೧೩]

ಆನಂದವರ್ಧನನು ಹೇಳುವ ವಸ್ತುಧ್ವನಿಯ ಉದಾಹರಣೆಗಳಿಗೂ ಪರ್ಯಾಯೋಕ್ತದ ಉದಾಹರಣೆಗಳಿಗೂ ಭೇದವನ್ನು ತೋರಿಸಿ ಪರ್ಯಾಯೋಕ್ತದಲ್ಲಿಲ್ಲದ ಚಮತ್ಕಾರ ವಸ್ತುವಿನಲ್ಲುಂಟೆಂದು ವಿವರಿಸುವುದೇ ಅಭಿನವಗುಪ್ತರ ಉದ್ದೇಶ. ವಸ್ತುಧ್ವನಿಕಾವ್ಯದಲ್ಲಿ ವ್ಯಂಗ್ಯಾಂಶವಿರುವುದು ಮಾತ್ರವಲ್ಲ, ಅದು ವಾಚ್ಯಾಂಶಕ್ಕಿಂತ ಹೆಚ್ಚಿನ ಚಾರುತ್ವವನ್ನು ಪಡೆದು ಪ್ರಧಾನವೂ ಆಗಿರುತ್ತದೆಂದು ಧ್ವನಿವಾದಿಗಳ ಸಿದ್ಧಾಂತ. ಪರ್ಯಾಯೋಕ್ತದಲ್ಲಿ ವ್ಯಂಗ್ಯಾಂಶವಿದ್ದರೂ ಅದರಲ್ಲಿ ವಾಚ್ಯಕ್ಕಿಂತ ಹೆಚ್ಚಿನ ಚಮತ್ಕಾರಾತಿಶಯವಿರುವುದಿಲ್ಲ, ವಾಚ್ಯಾಂಶಕ್ಕೇ ವ್ಯಂಗ್ಯಾಂಶಕ್ಕಿಂತ ಹೆಚ್ಚಿನ ಚಮತ್ಕಾರವಿರುವುದೆಂದು ಅವರ ವಾದ. ಈ ದೃಷ್ಟಿಯಿಂದ ಅವರು ಪ್ರಕೃತ ಲಕ್ಷ್ಯದಲ್ಲಿ ವಿಷ ಹಾಕಿಕೊಳ್ಳುವುದನ್ನು ತಪ್ಪಿಸಿಕೊಳ್ಳಬೇಕು ಎಂಬ ವ್ಯಂಗ್ಯಾಂಶವು ಚಮತ್ಕಾರಶೂನ್ಯವಾಗಿರುವುದರಿಂದಲೇ ಅಪ್ರಧಾನ ಮತ್ತು ಚಮತ್ಕಾರಯುಕ್ತವಾದ ಪರ್ಯಾಯೋಕ್ತ ಅಥವಾ ವಾಚ್ಯಾಂಶವೇ ಪ್ರಧಾನ ಎಂದು ನಿರ್ಣಯಿಸುತ್ತಾರೆ.

ಕಾವ್ಯಮೀಮಾಂಸಕಾರ ರಾಜಶೇಖರನ ಪ್ರಕಾರ, ಕಾವ್ಯವಸ್ತುಗಳು ಏಳು ಬಗೆ. ಅವು ಯಾವುವೆಂದರೆ : ದಿವ್ಯ, ದಿವ್ಯಮಾನುಷ, ಮಾನುಷ, ಪಾತಾಲೀಯ,

ಮರ್ತ್ಯಪಾತಾಲೀಯ, ದಿವ್ಯಪಾತಾಲೀಯ ಮತ್ತು ದಿವ್ಯಮರ್ತ್ಯಪಾತಾಲೀಯ. ಅವುಗಳಲ್ಲಿ, ದಿವ್ಯಮಾನುಷ ಹಾಗೂ ದಿವ್ಯಮರ್ತ್ಯಪಾತಾಲೀಯ ಇವುಗಳಿಗೆ ಅವನು ಆರಿಸಿ ತೆಗೆದುಕೊಟ್ಟಿರುವ ಪದ್ಯಗಳು ಮಹಾಭಾರತ ವಸ್ತುವನ್ನಾಶ್ರಯಿಸಿದ ಯಾವುದೋ ಸಾಹಿತ್ಯ ಕೃತಿಗಳದ್ದು.

ದಿವ್ಯಮಾನುಷಕ್ಕೆ :

ಇಂದ್ರನು ಅರ್ಜುನನಿಗೆ ಸ್ವರ್ಗವನ್ನು ತೋರಿಸಿ ಹೇಳುವ ಮಾತು : ಅರ್ಜುನ, ಇದೇ ನಂದನವನ. ಕಲ್ಪಿಸಿಕೊಂಡ ಕೂಡಲೇ ಹುಟ್ಟುವ ಮಧುವನ್ನು ಇಲ್ಲಿ ದೇವತಾಮಿಥುನಗಳು ಸೇವಿಸುತ್ತಿವೆ. ಅಲ್ಲದೆ, ಬೆಳದಿಂಗಳಿನಿಂದ ಒಸರುತ್ತಿರುವ ನೀರು ಸಂತಾನವೃಕ್ಷಗಳ ಬುಡದಲ್ಲಿ ನಿರ್ಮಿಸಿರುವ ಚಂದ್ರಕಾಂತ ಶಿಲೆಗಳ ಪಾತಿಗಳಲ್ಲಿ ತುಂಬಿಕೊಳ್ಳುತ್ತಿದೆ.[೧೪]

ದಿವ್ಯಮರ್ತ್ಯಪಾತಾಲೀಯಕ್ಕೆ :

ಆಸ್ತೀಕನೆಂಬ ಮುನಿಯು ಪರೀಕ್ಷಿದ್ರಾಜನ ಯಜ್ಞದಲ್ಲಿ ತಕ್ಷಕನ ವಂಶವನ್ನೂ ಹಾಗೂ ಇಂದ್ರನನ್ನೂ ರಕ್ಷಿಸಿದನು. ಮಲಯ ಪರ್ವತಶ್ರೇಣಿಗಳಲ್ಲಿ ಶ್ರೀಗಂಧದ ಮರಗಳಿಗೆ ಜೋತುಬಿದ್ದು ಉಯ್ಯಾಲೆಯಾಡುವ ನಾಗಕನ್ಯೆಯರು ಅವನ ಕೀರ್ತಿಯನ್ನು ವಿಲಾಸಪೂರ್ವಕ ಹಾಡುತ್ತಾರೆ.[೧೫]

III ಮಹಾಭಾರತದ ವಸ್ತುವನ್ನು ಅವಲಂಬಿಸಿ ಕಾವ್ಯ ರಚಿಸುವುದರ ಬಗೆಗೆ ಭಾಮಹ ಹಾಗೂ ದಂಡಿಯರ ಸಲಹೆಗಳು

ಮಹಾಭಾರತವು ಪುಂಖಾನುಪುಂಖವಾಗಿ ಭೋರ್ಗರೆವ ಕಥಾವಸ್ತುಗಳ ವಾಹಿನಿಯಷ್ಟೆ. ಅವುಗಳನ್ನು ಆಶ್ರಯಿಸಿ ಸಾಹಿತ್ಯವನ್ನು ರಚಿಸುವಾಗ ಎಲ್ಲಿ ಕಥಾವಸ್ತು ಪರಿವರ್ತನೆಯನ್ನು ಮಾಡಬೇಕಾಗಿಲ್ಲ ಎಂಬುದರ ಬಗೆಗೆ ಭಾಮಹ ಹಾಗೂ ದಂಡಿಯರೂ, ಎಲ್ಲಿ ಮಾಡಲೇಬೇಕು ಎಂಬ ಬಗೆಗೆ ಭಾಮಹನೂ ಹೀಗೆ ಮಾರ್ಗದರ್ಶನ ಮಾಡಿದ್ದಾರೆ.[೧೬]

ಅ. ಪರಿವರ್ತನೆ ಬೇಕಿಲ್ಲ : 'ನಿನ್ನ (ಯಯಾತಿಯ) ಮುಪ್ಪನ್ನು ನಾನು ತಳೆಯುವೆ' ಎಂದು ಪ್ರತಿಜ್ಞೆ ಮಾಡಿ ಅದೇ ರೀತಿ ಪುರು ತಂದೆಯ ಮುಪ್ಪನ್ನು ಧರಿಸಿದ್ದು ಧರ್ಮಪ್ರತಿಜ್ಞೆ. 'ದುಃಶಾಸನನನ್ನು ಹೊಸಕಿ ಹಾಕಿ ಅವನ ರಕ್ತವನ್ನು ಕುಡಿಯುವೆನು' ಎಂದು ಭೀಮನು ಪ್ರತಿಜ್ಞೆ ಮಾಡಿ ಅದನ್ನು ನಿರ್ವಾಹ ಮಾಡುವುದು ಇದು ಕೋಪಪ್ರತಿಜ್ಞೆ.[೧೭] ಐವರು ಪಾಂಡುಪುತ್ರರಿಗೆ ಹೆಂಡತಿಯಾಗಿಯೂ ಸಹ ದ್ರೌಪದಿಯು ಪತಿವ್ರತೆಯರಲ್ಲಿ ಅಗ್ರಗಣ್ಯೆ. ಈ ವಿಚಾರ ದೈವಗಾಂಭೀರ್ಯದ್ದು.

ಆ. ಪರಿವರ್ತನೆ ಬೇಕು : ಹಿಂದೆ ಹೇಳಿದ ಪ್ರಸಂಗಗಳನ್ನು ಬಿಟ್ಟು ಬೇರೆಡೆ ಪ್ರತಿಜ್ಞೆಗಳು ಆಚರಣೆಗೆ ಬಂದಿದ್ದನ್ನೇ ಆಗಲೀ ಅಥವಾ ಪ್ರತಿಜ್ಞಾಭಂಗವನ್ನೇ ಆಗಲೀ ವರ್ಣಿಸಬಾರದು.[೧೪] ಪ್ರಾಯೋಪವೇಶ ಮಾಡಿ ಸಾಯುತ್ತೇನೆಂದು ಹೊರಟ ದುರ್ಯೋಧನನು ರಾಜ್ಯಕ್ಕಾಗಿ ಮತ್ತೊಮ್ಮೆ ಎದ್ದುನಿಂತ ಎನ್ನುವುದು ಧರ್ಮವಿರುದ್ಧ. ದ್ಯೂತಕ್ಕೆ ನನ್ನನ್ನು ಯಾರಾದರೂ ಕರೆದಲ್ಲಿ ಅವರ ಆಹ್ವಾನವನ್ನು ನಿರಾಕರಿಸುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದ ಯುಧಿಷ್ಠಿರನು ಶಕುನಿಯ ಜೊತೆ ಜೂಜಾಡಿದ ಎನ್ನುವುದು ಅರ್ಥವಿರುದ್ಧ. ನಿನ್ನ ಮಾತಿನಂತೆ ನಾನು ಎಂದೆಂದಿಗೂ ಮುನಿಯಂತೆ ವಾಸ ಮಾಡುತ್ತೇನೆ ಎಂದು ತಂದೆಗೆ ಮಾತುಕೊಟ್ಟ ಭೀಷ್ಮನು ಅದರಂತೆಯೇ ನಡೆದುಕೊಂಡ ಎಂಬುದು ಕಾಮವಿರುದ್ಧ.

ಭಾಮಹನ ಸಲಹೆಗಳು ವೈಯಕ್ತಿಕವೇ ಹೊರತು ಅವುಗಳನ್ನು ಉತ್ಕೃಷ್ಟವೆಂದು ಹೇಳಲಾಗುವುದಿಲ್ಲ. ಮುಂದಿನ ಸಾಹಿತ್ಯಕಾರರು ಈ ಸಲಹೆಗಳಿಗೆ ಬದ್ಧರಾಗಲೂ ಇಲ್ಲ. ಆಗಬೇಕಾಗಿಯೂ ಇರಲಿಲ್ಲ! ಮೂಲ ಕಥಾವಸ್ತುವಿನಲ್ಲಿ ಪರಿವರ್ತನೆ ಮಾಡಲು ಕವಿಗಳಿಗೆ ಪ್ರತಿಭೆ, ಚಿಂತನೆ, ವೈಯಕ್ತಿಕವಾದ ಔಚಿತ್ಯನೌಚಿತ್ಯ ವಿಚಾರಗಳು, ಘಟನಾ ಸಂಕ್ಷೇಪಾವಶ್ಯಕತೆಗಳು, ನಾಟಕವಾಗಿ ಪರಿವರ್ತಿಸುವ ಪ್ರಸಂಗ ಬಂದಾಗ ಮೂಲ ಘಟನೆಗಳನ್ನೆಲ್ಲ ರಂಗದ ಮೇಲೆ ತೋರಿಸಲು ಸಾಧ್ಯವಾಗದಿದ್ದರೆ ಮಾಡಲೇಬೇಕಾದ ಪರಿವರ್ತನೆಯ ಅನಿವಾರ್ಯತೆ, ಮೂಲ ವಸ್ತುವನ್ನು ರೂಪಿಸಿದ ಕವಿಗಿಂತ ಭಿನ್ನ ದೃಷ್ಟಿಯನ್ನು ಉದ್ದೇಶಪೂರ್ವಕವಾಗಿ ತಳೆಯುವುದು ಇತ್ಯಾದಿ ನೂರಾರು ಕಾರಣಗಳು ಸಿಕ್ಕುತ್ತವೆ. ಕೆಲವೊಮ್ಮೆ ಪರಿವರ್ತಿತ ಸಾಹಿತ್ಯಕ್ಕಿಂತ ಮೂಲವೇ ಎಷ್ಟೋ ಚೆನ್ನು ಅನ್ನಿಸುವ ಪ್ರಸಂಗಗಳು ವಿರಳವೇನೂ ಅಲ್ಲ. ಹೀಗಾಗಿ, ಭಾಮಹನ ಸಲಹೆಗಳು ಕ್ಷೋದಕ್ಷಮವೆನ್ನುವಂತಿಲ್ಲ. ದುರ್ಯೋಧನನು ತಾನು ಪ್ರತಿಜ್ಞೆ ಮಾಡಿದ್ದನ್ನು ಮುರಿದಿದ್ದು ಅವನ ವ್ಯಾವಹಾರಿಕ ದೃಷ್ಟಿಗೆ ಅನುಗುಣವಾಗಿಯೇ ಇದೆ. ಯುಧಿಷ್ಠಿರನು ಜೂಜಾಡಿದ ವಾಸ್ತವಿಕ ವಿಚಾರವನ್ನು ಕೈಬಿಟ್ಟಲ್ಲಿ ಮಹಾಭಾರತ ಯುದ್ಧಕ್ಕೇ ಅವಕಾಶ ತಪ್ಪಿಹೋಗುತ್ತದೆ. ಒಟ್ಟಿನಲ್ಲಿ ಮಹಾಭಾರತದ ಕಥಾವಸ್ತುಗಳಿಗೆ ಕಾವ್ಯಶಾಸ್ತ್ರ ಗಾಂಭೀರ್ಯದ ಹಿನ್ನೆಲೆಯಲ್ಲಿ ವಿಧಿನಿಷೇಧಗಳ ನೆಲೆಗಟ್ಟು ಒದಗಿಸಿಕೊಡುವ ಉತ್ಸಾಹದಲ್ಲಿ ಭಾಮಹನು ದುರ್ಯೋಧನ ಹಾಗೂ ಯುಧಿಷ್ಠಿರರ ಮಾನಸಿಕ ಸ್ತರದ ಬಗೆಗೆ ಚಿಂತನೆ ಮಾಡುವ ಗೋಜಿಗೇ ಹೋಗಲಿಲ್ಲ.

IX ಮಹಾಭಾರತದ ಘಟನೆಗಳನ್ನು ಆಶ್ರಯಿಸಿ ಪಂಡಿತರಾಜ ಜಗನ್ನಾಥನು ಪ್ರಾಸಂಗಿಕವಾಗಿ ರಚಿಸಿರುವ ಪದ್ಯಗಳು.

ಪಂಡಿತರಾಜನು 'ರಸಗಂಗಾಧರ'ದಲ್ಲಿ ಮಹಾಭಾರತದ ಘಟನೆಗಳಿಗೆ ತನ್ನದೇ ಆದ ರೀತಿಯಲ್ಲಿ ಸ್ಪಂದಿಸಿರುವ ರೀತಿಗಳನ್ನೀಗ ಗಮನಿಸಬಹುದು.

"ಸಾಕ್ಷಾತ್ ಸೂರ್ಯನ ಮಗನೇ ಸತ್ತುಹೋದ. ಪಾಂಡವರೆಲ್ಲ ವಿಜೃಂಭಿಸುತ್ತಿದ್ದಾರೆ. ಎಲೈ ದುರ್ಯೋಧನನ ಪ್ರಾಣವೆ! ನೀನು ಮಾತ್ರ ಇನ್ನೂ ಹೋಗಲಿಲ್ಲವೆ?"[೧೯] ಇದು ವಿಷಾದವೆಂಬ ವ್ಯಭಿಚಾರಿ ಭಾವಕ್ಕೆ ಉದಾಹರಣೆ.

ದ್ರೌಪದಿಯ ಮೊಟ್ಟ ಮೊದಲನೆಯ ದೃಷ್ಟಿಗಳು ಬಗ್ಗುತ್ತ, ಅಲುಗುತ್ತ, ಅಗಲವಾಗಿ ಹಾಗೂ ಚಂಚಲವಾಗಿ ಪಾಂಡುಪುತ್ರರ ಮೇಲೆ ಬೀಳುತ್ತಿವೆ.[೨೦]

ಇಲ್ಲಿ ದೃಷ್ಟಿಗಳು ಧರ್ಮರಾಜನ ಮೇಲೆ ಅವನ ಧರ್ಮನಿಷ್ಠೆಯಿಂದಾಗಿ ಭಕ್ತಿಯಿಂದೊಡಗೂಡಿರುವುದು, ಭೀಮನ ಬೃಹದಾಕಾರದ ಕಾರಣದಿಂದಾಗಿ ಬೆದರಿರುವುದು, ಅರ್ಜುನನ ಅಲೌಕಿಕ ಕೀರ್ತಿಯ ಶ್ರವಣದಿಂದಾಗಿ ಸಂತೋಷ ಪಟ್ಟಿರುವುದು, ನಕುಲ ಸಹದೇವರ ಪರಮ ಸೌಂದರ್ಯದ ಕಾರಣದಿಂದಾಗಿ ಅತ್ತಿತ್ತ ಹೊಯ್ದಾಡುವುದು ಇವುಗಳು ವ್ಯಂಗ್ಯ. ಈ ಪ್ರಸಂಗದಲ್ಲಿ ರತಿಯು ಏಕನಾಯಕ ವೃತ್ತಿಯಲ್ಲದೇ ಬಹುನಾಯಕ ವೃತ್ತಿಯಾದ್ದರಿಂದ ರಸಾಭಾಸ.

ಯುಧಿಷ್ಠಿರನೆಂಬ ಹೆಸರಿನ ರಾಜನೊಬ್ಬನಿದ್ದನು. ಅವನು ಎಲ್ಲಾ ಸದ್ಧರ್ಮಗಳಿಗೂ ಆಶ್ರಯ ನೀಡುವಂಥವನಾಗಿದ್ದು, ಪ್ರಜೆಗಳಿಗೆ ಅವನು ತೋರಿಬರುತ್ತಿದ್ದುದು ಮರಗಳಿಗೆ ಚೈತ್ರಮಾಸದಂತೆ.[೨೧]

ಇದು ಉಪಮಾಲಂಕಾರದಲ್ಲಿ ಕೇವಲ ಶುದ್ಧಪರಂಪರಿತದ ಉದಾಹರಣೆ ಯಾಗುತ್ತದೆ.

'ರಾಜ! ಯುದ್ಧದಲ್ಲಿ ನೀನು ಬಾಹುಗಳಲ್ಲೆರಡರಲ್ಲೂ ಬಿಲ್ಲನ್ನು ಬಗ್ಗಿಸಿ ಅದರ ಭಯಂಕರ ಧ್ವನಿಯಿಂದಲೇ ಮಹಾಪರಾಕ್ರಮಿಗಳಾದ ಶತ್ರುಸಮೂಹವನ್ನು ಧ್ವಂಸ ಮಾಡುವ ನಿನ್ನನ್ನು ರಣಮಧ್ಯದಲ್ಲಿ ನೀಡಿದ ರಾಜರ ಪೈಕಿ ಮನೋಹರವಾದ ಗಾಂಡಿವ ಧನುಸ್ಸಿನಿಂದ ಹೊರಚಿಮ್ಮುತ್ತಿರುವ ಬಾಣಸಮೂಹದ ಜ್ವಾಲಾಪಂಕ್ತಿಯ ಭಯಂಕರ ನೃತ್ಯದಿಂದ ಖಾಂಡವವನವನ್ನು ನಾಶ ಮಾಡುವ ಮಹಾಕ್ರೋಧಿ ಅರ್ಜುನನನ್ನು ಸ್ಮರಣೆ ಮಾಡಿಕೊಳ್ಳದವನು ಇದ್ದಾನೆಯೇ?[೨೨]

ಇದು ಸ್ಮರಣಾಲಂಕಾರದ ಉದಾಹರಣೆ.

"ದ್ರೌಪದಿಯು 'ಅಯ್ಯೋ ಕೆಟ್ಟೆ' ಎಂದು ಗೋಳಾಡುವುದನ್ನು ನೋಡಿದರೆ, ಪ್ರಾಯಶಃ, ಆಕಾಶವು ಕೆಳಗೆ ಬೀಳಬಹುದು, ಚಂದ್ರನು ಚೂರುಚೂರಾಗಬಹುದು, ಸಮಸ್ತ ಪರ್ವತಗಳು ಹಾಗೂ ಸಾಗರಗಳೊಡನೆಯೇ ಭೂಮಿಯು ಅಲ್ಲಾಡಿಹೋಗಬಹುದು ಅಷ್ಟೇ ಅಲ್ಲ, ದಿಕ್ಕುಗಳೆಲ್ಲ ಹತ್ತಿಕೊಂಡು ಉರಿಯಬಹುದು"[೨೩]

ಇಲ್ಲಿ ದ್ರೌಪದಿಯ ರೋದನದಿಂದ ಆಕಾಶ ಕೆಳಗೆ ಬೀಳುವುದು ಇತ್ಯಾದಿ ಸಂಭಾವನೆಗಳಿದ್ದಾಗ್ಯೂ ಇಲ್ಲಿ ಕಾರ್ಯಕಾರಣಭಾವ ಇರುವುದರಿಂದ ಇದು ಉತ್ಪ್ರೇಕ್ಷಾಲಂಕಾರಕ್ಕೆ ಉದಾಹರಣೆ ಆಗುವುದಿಲ್ಲ.

X ಆಲಂಕಾರಿಕರು ಮಹಾಭಾರತವನ್ನು ಕಂಡ ಬಗೆಗೆ ಪ್ರಕೃತ ಲೇಖಕನ ಅನ್ನಿಸಿಕೆಗಳು

ಭಾರತೀಯರ ಜೀವನಶೈಲಿಯ ಅವಿಭಾಜ್ಯ ಅಂಗವೇ ಆಗಿರುವ ಮಹಾಭಾರತದಂಥ ಅದ್ಭುತ ಕಥಾರಸಧಾರೆಯ ಬಗೆಗೆ ಆಲಂಕಾರಿಕರು ಅಸಡ್ಡೆಯನ್ನು ತಾಳಿರುವುದು ಈ ಉಲ್ಲೇಖಗಳಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ಆನಂದವರ್ಧನನೊಬ್ಬ ಈ ವಿಷಯದಲ್ಲಿ ಸ್ವಲ್ಪ ವಾಸಿ. ಇಡೀ ಮಹಾಭಾರತದಂಥ ಬೃಹತ್ ಸಾಹಿತ್ಯದಲ್ಲಿ ಗೃಧ್ರಗೋಮಾಯುಸಂವಾದ ಮತ್ತು ಬೇರಾವ ತಾತ್ತ್ವಿಕ ಚಿಂತಕರಿಗೂ ಗೋಚರಿಸದ 'ಅಯಂ ಸ ರಶನೋತ್ಕರ್ಷೀ' ಎಂಬ ಪದ್ಯ ಇಷ್ಟು ಬಿಟ್ಟರೆ ಮಮ್ಮಟ ವಿಶ್ವನಾಥರಿಗೆ ಹೇಳುವುದಕ್ಕೆ ಇನ್ನೇನೂ ಸಿಕ್ಕಲಿಲ್ಲವೆಂಬುದು ತೀರಾ ವಿಷಾದನೀಯ. ರಸದ ಬಗೆಗೇ ಆಗಲೀ ಅಲಂಕಾರದ ಬಗೆಗೇ ಆಗಲೀ ಅಥವಾ ಧ್ವನಿಪ್ರಭೇದಗಳ ಬಗೆಗೇ ಆಗಲೀ ಉದಾಹರಣೆಗಳ ಧಾರೆಯನ್ನೇ ರಸಿಕರ ಹೃದಯಕ್ಕೆ ಅಭಿಷೇಕ ಮಾಡುವಷ್ಟು ಸಮೃದ್ಧ ಸಾಹಿತ್ಯವಾದ ಮಹಾಭಾರತದಿಂದ ಯಾವುದೋ ಒಂದು ಕ್ಷುದ್ರ ಘಟನೆ ಉದಾಹರಿಸಿ ಶಾಸ್ತ್ರ ಗಾಂಭೀರ್ಯದ ಕವಚವನ್ನು ಅದಕ್ಕೆ ಹೊದ್ದಿಸುವ ಪ್ರಯತ್ನವನ್ನು ಇವರಿಬ್ಬರೂ ಮಾಡಿದ್ದಾರೆ. ಮೂಲತಃ ಈ ಅದ್ಭುತ ವಿಚಾರ ಹೊಳೆದದ್ದು ಮಮ್ಮಟನಿಗೆ. ವಿಶ್ವನಾಥ ಹಾಗೂ ಹೇಮಚಂದ್ರರು ಅವನ ಮಾತನ್ನು ಭಟ್ಟಿ ಇಳಿಸಲು ಪ್ರಯತ್ನಿಸಿದ್ದಾರಷ್ಟೆ. ಅದು ಹಾಗಿರಲಿ, ಪ್ರಾಚೀನ ಸಾಹಿತ್ಯದ ಸುಂದರ ವಿಶ್ಲೇಷಕನೆಂದು ಅನೇಕರಿಂದ ಹೊಗಳಿಸಿಕೊಂಡ ಕುಂತಕನು ವಕ್ರೋಕ್ತಿಜೀವಿತದಲ್ಲಿ, 'ರಾಮಾಯಣ-ಮಹಾಭಾರತಗಳಲ್ಲಿ ಕ್ರಮವಾಗಿ ಕರುಣ ಹಾಗೂ ಶಾಂತ ಇವೆರಡೂ ಪ್ರಧಾನರಸವೆಂದು ಪೂರ್ವಸೂರಿಗಳೇ ಅಭಿಪ್ರಾಯಪಟ್ಟಿದ್ದಾರೆ'[೪೫] ಎಂಬ ಮಾತನ್ನು ಬಿಟ್ಟರೆ ಮತ್ತೇನನ್ನೂ ಹೇಳದೇ ನುಣುಚಿಕೊಂಡಿದ್ದು ಏಕೆಂದು ತಿಳಿಯುವುದಿಲ್ಲ. ಧ್ವನಿಪ್ರಭೇದಗಳನ್ನು ನೀಡುವಾಗ ಪ್ರಬಂಧೋದಾಹರಣೆಯನ್ನು ಮಮ್ಮಟ ಹಾಗೂ ವಿಶ್ವನಾಥರು ನೀಡುವುದಿಲ್ಲ. ಇದಕ್ಕೆ ಗ್ರಂಥವಿಸ್ತರ ಭೀತಿಯೆಂಬ ನೆಪವನ್ನು ಕಾರಣವಾಗಿ ಅವರ ಭಕ್ತರು ಬೇಕಾದರೆ ನೀಡಿ ಅವರ ಅವಜ್ಞೆಯನ್ನು ಸಮರ್ಥಿಸಬಹುದು. ಆದರೆ ಆನಂದವರ್ಧನನು ವಿಸ್ತಾರವಾಗಿಯೇ ಮಹಾಭಾರತದ ವಿಶ್ಲೇಷಣೆ ಮಾಡಿದ್ದಾನಷ್ಟೆ. ಸಾಹಿತ್ಯ ದರ್ಪಣಕ್ಕೆ ರುಚಿರಾವ್ಯಾಖ್ಯಾನ ಬರೆದ ಶಿವದತ್ತನು ವಿಸ್ತಾರವಾಗಿ ಪ್ರಬಂಧೋದಾಹರಣೆಗಳನ್ನು ನೀಡಿರುವುದು ಶ್ಲಾಘ್ಯ. ಆದರೆ ಅವನ ಚಿಂತನೆಗಳಲ್ಲಿ ಎಷ್ಟಕ್ಕೆ ಸಮ್ಮತಿಯ ಮುದ್ರೆ ಒತ್ತಬಹುದು ಎಂಬುದು ಚಿಂತ್ಯ.

ಪರಾಮೃಷ್ಟ ಗ್ರಂಥಗಳು

೧. ಕಾವ್ಯಪ್ರಕಾಶ–ಮಮ್ಮಟ ವಿರಚಿತ; ಸಂ. ಎಸ್.ಎಸ್. ವೆಂಕಟನಾಥಾಚಾರ್ಯ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು–೧೯೭೪.

೨. ಸಾಹಿತ್ಯ ದರ್ಪಣ–ವಿಶ್ವನಾಥ ವಿರಚಿತ; ಸಂಪಾದಕ ಹಾಗೂ ವ್ಯಾಖ್ಯಾತೃ : ಶಿವದತ್ತ, ವೆಂಕಟೇಶ್ವರ ಸ್ಟೀಂ ಮುದ್ರಣಾಲಯ, ಸಂವತ್–೧೯೭೩.

೩. ಕಾವ್ಯಾನುಶಾಸನ ಹೇಮಚಂದ್ರ ವಿರಚಿತ; ಸಂ. ವಾಸುದೇವ ಪಣಶೀಕರ ನಿರ್ಣಯಸಾಗರ ಮುದ್ರಣಾಲಯ, ಮುಂಬಯಿ–೧೯೩೪.

೪. ರಸಗಂಗಾಧರ–ಜಗನ್ನಾಥ ವಿರಚಿತ; ಸಂ. ಭಟ್ಟ ಶ್ರೀಮಥುರಾನಾಥಶಾಸ್ತ್ರಿ; ನಿರ್ಣಯಸಾಗರ ಮುದ್ರಣಾಲಯ–೧೯೩೯.

೫. ಕನ್ನಡ ಕಾವ್ಯಮೀಮಾಂಸೆ–ಅನುವಾದಕರು : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು–೧೯೬೯.

೬. ಕನ್ನಡ ಕಾವ್ಯಾಲಂಕಾರ ಮತ್ತು ಕನ್ನಡ ಕಾವ್ಯಾದರ್ಶ ಸಂಯುಕ್ತ ಸಂಪುಟ; ಅನುವಾದಕರು : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ–೧೯೭೫.

೭. ವಕ್ರೋಕ್ತಿ ಜೀವಿತ–ಕುಂತಕ ವಿರಚಿತ : ಸಂ ಮತ್ತು ಇಂಗ್ಲಿಷ್ ಅನುವಾದಕರು : ಡಾ. ಕೆ. ಕೃಷ್ಣಮೂರ್ತಿ, ಕರ್ನಾಟಕ ವಿಶ್ವವಿದ್ಯಾನಿಲಯ–೧೯೭೭.

ಆಧಾರಗಳು

೧. ಅಯಂ ಸ ರಶನೋತ್ಕರ್ಷೀ ಪೀನಸ್ತನವಿಮರ್ದನಃ
ನಾಭ್ಯೂರುಜಘನಸ್ಪರ್ಶೀ ನೀವೀವಿಸ್ರಂಸನಃ ಕರಃ
ಅಪರಸ್ಯ ರಸಾದೇರ್ವಾಚ್ಯಸ್ಯ ವಾ ವಾಕ್ಯಾರ್ಥೀಭೂತಸ್ಯ ಅಂಗಮ್ ರಸಾದಿ
ಅನುರಣನರೂಪಂ ವಾ.

ಕಾವ್ಯಪ್ರಕಾಶ, ೫ನೇ ಉಲ್ಲಾಸ ಪದ್ಯೋದಾಹರಣೆ ೧೧೭ ಪುಟ ೧೫೦

ರಸಾದೇರ್ವಾಕ್ಯಾರ್ಥೀಭೂತಸ್ಯ ಪ್ರಧಾನಾಭೂತಸ್ಥ ರಸಾದ್ಯಂಗವವ್, ವಾಚ್ಯಸ್ಯ ತು ವಸ್ತ್ವಲಂಕಾರರೂಪಸ್ಯಾಲಂಕಾರವಸ್ತುರೂಪಂ ವ್ಯಂಗ್ಯಂ ಗುಣೀಭೂತಮೇವ, ಅಪರಾಂಗತ್ವಾತ್ ಅಯಮಿತಿ

ಸಂಕೇತ ವ್ಯಾಖ್ಯಾನ

೨. ಅಯಂ ಸ ರಶನೋತ್ಕರ್ಷೀ ನೀವೀವಿಸ್ರಂಸನಃ ಕರಃ । ನಾಭ್ಯೂರುಜಘನಸ್ಪರ್ಶೀ ಪೀನಸ್ತನವಿಮರ್ದನಃ ॥ ಇತಿ ಪಾಠೋ ಯುಕ್ತಃ, ಸಂಭೋಗಕ್ರಮಭಣನಾತ್, ಪರಂ ಶೋಕಾರ್ತತಯಾ ವ್ಯತ್ಯಯೋ ನ ದುಷ್ಟಃ. ಶೃಂಗಾರ ಇತಿ. ರಣಭುವಿ ಭೂರಿಶ್ರವಸಃ ಕೃತ್ತಹಸ್ತಪ್ರೇಕ್ಷಣೇನ ಪೂರ್ವರತವೃತ್ತಾಂತಃ ಸ್ಮರ್ಯಮಾಣಃ ಸಂಪ್ರತಿ ಧ್ವಸ್ತತಯಾ ಗತಃ ಶೋಕವಿಭಾವತಾಂ ಯಾತ್ಯತಃ ಕರುಣಸ್ಯಾಂಗಿನೋಂಗಂ ವಿಪ್ರಲಂಭಃ

೩. ಅಯಂ ಸ ರಶನೋತ್ಕರ್ಷೀ ಪೀನಸ್ತನವಿಮರ್ದನಃ ... ಇದಂ ಹಿ ಭೂರಿಶ್ರವಸಃ ಸಮರಭುವಿ ಪತಿತಂ ಬಾಹುಂ ದೃಷ್ಟ್ವಾ ತತ್ಕಾಂತಾನಾಮ್ ಅನುಶೋಚನಮ್. ಪೂರ್ವಂ ಪಕ್ಷದ್ವಯೇ ವಿಪ್ರಲಂಭಕರುಣಯೋರನ್ಯತ್ರಾಂಗಭಾವಗಮನಾನ್ನಿರ್ವಿರೋಧಮುಕ್ತಮ್. ಅಧುನಾ ತು ವಿಪ್ರಲಂಭಃ ಕರುಣಸ್ಯೈವಾಂಗತಾಂ ಪ್ರತಿಪನ್ನೋ ನ ವಿರೋಧೀತಿ.ತಥಾಹಿ. ಕರಗ್ರಹಣಾಸಹಾದಿನಾ ಈರ್ಷ್ಯಾ ವಿಪ್ರಲಂಭವೃತ್ತಾಂತಃ ಸ್ಮರ್ಯಮಾಣ ಇದಾನೀಂ ವಿಧ್ವಸ್ತತಯಾ ಶೋಕವಿಭಾವತಾಂ ಪ್ರಕೃಷ್ಟಾಂ ಪ್ರತಿಪದ್ಯತೇ ಇತಿ ವಾಕ್ಯಾರ್ಥೀಭೂತಸ್ಯ ಕರುಣಸ್ಯ ವಿರೋಧಿನಾಪಿ ಶೃಂಗಾರೇಣ ಪರಿಪೋಷ ಏವ ವಿಧೀಯತೇ. ಪರಸ್ತು ಶೃಂಗಾರಪೋಷಿತೇನ ಕರುಣೇನಾತ್ರ ಮುಖ್ಯ ಏವಾರ್ಥ ಉಪೋದ್ವಲ್ಯತೇ. ಉಕ್ತಂ ಹಿ ಗುಣಃ ಕೃತಾತ್ಮ ಸಂಸ್ಕಾರಃ ಪ್ರಧಾನಂ ಪ್ರತಿಪದ್ಯತೇ. ಪ್ರಧಾನಸ್ಯೋಪಕಾರೇ ಹಿ ತಥಾಭೂಯ ನಿವರ್ತತೇ ಇತಿ. **ಕಾವ್ಯಾನುಶಾಸನ ಪುಟ ೬೧, ತೃತೀಯಾಧ್ಯಾಯ ಪುಟ ೬೧, ೧೪೦**

೪. ಪ್ರಾಣಪ್ರಿಯಸ್ಯ ವಿಯೋಗೇ ಯುವತ್ಯಾಸ್ತೇನ ಕೃತಸ್ಯ ಶೃಂಗಾರೋಚಿತಸ್ಯ ರಸನೋತ್ಕರ್ಷಣಾದೇಃ ಸ್ಮರಣಂ ಹೃದಯಂ ವಿಗಲಚ್ಛೋಕಾವೇಗಂ ಪ್ರವರ್ಧಯತೀತಿ ಶೃಂಗಾರಃ ಕರುಣಾಂಗಭೂತಃ, ರತೇಃ ಶೋಕೋಪಕಾರಿತಯಾ ಪ್ರಸ್ತುತತ್ವಾನ್ನ ಶೃಂಗಾರಃ ಕರುಣಾಂಗಭೂತಃ. ರತೇಃ ಶೋಕೋಪಕಾರಿತಯಾ ಪ್ರಸ್ತುತತ್ವಾನ್ನ ಶೃಂಗಾರಃ ಪ್ರಧಾನಭೂತತಾಂ ಪ್ರಾಪ್ತಃ, ಶೋಕಸ್ಯ ತಥಾ ಪ್ರವೃದ್ಧತ್ವಾತ್ ತತ್ಸ್ಥಾಯಿಭಾವಕಃ ಕರುಣಃ ಪುನಃ ಪ್ರಧಾನತಾಂ ಪ್ರಾಪ್ತಃ. ತಥಾ ಚ ಶೃಂಗಾರಮಪೇಕ್ಷ್ಯಾಸ್ಯ ಗುಣೀಭೂತವ್ಯಂಗ್ಯಕಾವ್ಯತ್ವಂ, ಕರುಣಮಪೇಕ್ಷ್ಯ ಪುನರಸ್ಯೈವ ಧ್ವನಿಕಾವ್ಯತ್ವಮ್.

೫. ವಿರೋಧಿನೋಽಪಿ ಸ್ಮರಣೇ ಸಾಮ್ಯೇನ ವಚನೇಽಪಿ ವಾ । ಸಾಹಿತ್ಯದರ್ಪಣ ೭.೩೦ ಸ್ಮರಣೇ, ಪೂರ್ವಾಭೂತಸ್ಯ ವ್ಯಂಜನಯಾ ಅವಗಮೇ. **ರುಚಿರಾ ವ್ಯಾಖ್ಯಾ.**

೬ ಪ್ರಬಂಧೇಪ್ಯರ್ಥಶಕ್ತಿ ಭೂಃ ಅಲಂ ಸ್ಥಿತ್ವಾ ಸ್ಮಶಾನೇಸ್ಮಿನ್ ಗೃಧ್ರಗೋಮಾಯುಸಂಕುಲೇ । ಕಂಕಾಲಬಹುಲೇ ಘೋರೇ ಸರ್ವಪ್ರಾಣಿಭಯಂಕರೇ ॥ ನ ಚೇಹ ಜೀವಿತಃ ಕಶ್ಚಿತ್ ಕಾಲಧರ್ಮಮುಪಾಗತಃ । ಪ್ರಿಯೋ ವಾ ಯದಿ ವಾ ದ್ವೇಷ್ಯಃ ಪ್ರಾಣಿನಾಂ ಗತಿರೀದೃಶೀ ॥ ಇತಿ ದಿವಾ ಪ್ರಭವವತೋ ಗೃಧ್ರಸ್ಯ ಪುರುಷವಿಸರ್ಜನಪರಮಿದಂ ವಚನಮ್ ... ಆದಿತ್ಯೋಽಯಂ ಸ್ಥಿತೋ ಮೂಢಾಃ ಸ್ನೇಹಂ ಕುರುತ ಸಾಂಪ್ರತಮ್ । ಬಹುವಿಘ್ನೋ ಮುಹೂರ್ತೋಽಯಂ ಜೀವೇದಪಿ ಕದಾಚನ । ಅಮುಂ ಕನಕವರ್ಣಾಭಂ ಬಾಲಮಪ್ರಾಪ್ತಯೌವನಮ್ । ಗೃಧ್ರವಾಕ್ಯಾತ್ ಕಥಂ ಬಾಲಾಸ್ತ್ಯಜಧ್ವಮವಿಶಂಕಿತಾಃ ॥ ಇತಿ ನಿಶಿ ವಿಜೃಂಭಮಾಣಸ್ಯ ಗೋಮಾಯೋ ರ್ಜನವ್ಯಾವರ್ತನನಿಷ್ಠಂ ಚ ವಚನಮಿತಿ ಪ್ರಬಂಧ ಏವ ಪ್ರಥತೇ. **ಕಾವ್ಯಪ್ರಕಾಶ ಚತುರ್ಥೋಲ್ಲಾಸ ಪುಟ ೧೩೨**

ಭಾರತೋಕ್ತಗೃಧ್ರಗೋಮಾಯುಸಂವಾದನಾಮಪ್ರಬಂಧಪ್ರತಿಪಾದ್ಯೇನಾರ್ಥೇನ ಗೃಧ್ರಗೋಮಾಯೋರ್ಭಕ್ಷಣಾಭಿಪ್ರಾಯೋ ವ್ಯಜ್ಯತೇ.

ಸಂಕೇತವ್ಯಾಖ್ಯಾ

ಪ್ರಬಂಧೇಽಪಿ ಮತೋ ಧೀರೈರರ್ಥಶಕ್ತ್ಯುದ್ಭವೋ ಧ್ವನಿಃ । ಪ್ರಬಂಧೇ ಮಹಾವಾಕ್ಯೇ

ಸಾಹಿತ್ಯದರ್ಪಣ – ೪ನೇ ಪರಿಚ್ಛೇದ ಪುಟ. ೩೫೨

ಅತ್ರ ದಿವಾ ಪ್ರಭವತೋ ಗೃಧ್ರೋಕ್ತ್ಯಾ ಝುಟಿತ್ಯೇವ ಯಾವದ್ದಿವಸಂ ಬಾಲಮುಪಾದಾಯ ಪ್ರಯಾಸ್ಯನ್ತ್ಯೇತೇ ಅಹಂ ಪುನರೇನಂ ಭಕ್ಷಯಿಷ್ಯಾಮಿ ಇತ್ಯಭಿಧಾನರೂಪವಸ್ತು ಪ್ರಬಂಧಗತಂ ವ್ಯಜ್ಯತೇ ... ಏತತ್ ಪುನಃ ಸ್ವತಃ ಸಂಭವ್ಯೇವೇತ್ಯನೇನ ಇತೋ ಝುಟಿತಿ ದಿವ್ಯೈವ ನಿವರ್ತಂತಾಮಿತಿ ವ್ಯಜ್ಯತೇ. ಗೃಧ್ರಸಂವಾದೇ ವಸ್ತುಧ್ವನಿ ... ಗೋಆಯುಸಂವಾದ ... ಮುಹೂರ್ತಂ ಪುನರ್ಜೀವಿತಾಶಾ ಪ್ರತೀಕ್ಷ್ಯತಾಮಿತಿ ಸ್ವತಃಸಂಭವಿನಾಭಿಧಾನನೇನ ವಸ್ತುನಾ ಯಾವನ್ನ ರಾತ್ರಿಸ್ತಾವದತ್ರೈವ ಸ್ಥಿತಿರ್ವಿಧೇಯಾ ಪುನರ್ಯಥಾ ಗತಾಸ್ತಥಾ ಗಂತವ್ಯಮಿತಿ ವಸ್ತು ವ್ಯಜ್ಯತೇ.

ಸಂಘಟಿತನಾನಾವಾಕ್ಯಕದಂಬರೂಪೇ ಇತ್ಯರ್ಥಃ **ರುಚಿರಾ ವ್ಯಾಖ್ಯಾ ಪುಟ ೩೫೪**

೭. ಕವಿನಿಬದ್ಧಪ್ರೌಢೋಕ್ತಿಸಿದ್ಧೇನ ವಸ್ತುನಾ ವಸ್ತುನೋಭಿವ್ಯಕ್ತಿರ್ಯಥಾ ಶ್ರೀಮದ್ಭಗವದ್ಗೀತಾಯಾಮರ್ಜುನೇನ ಮನ್ಯೈತೇ ಸುಹೃದಃ ಕಥಮೇತಾನೇವ ವಿನಿಹನ್ಯಾಂ ವಿನಿಘ್ನನ್ ಹಿ ಕುಲಘ್ನಃ ಸ್ಯಾಮಿತಿ ಪ್ರಾರ್ಥಿತಮ್. ನಾಹಮೇತಾನ್ನಿಹನಿಷ್ಯಾಮಿ ಇತಿ ಭಗವತಾ ಪುನರ್ನ ಕಸ್ಯಾಪಿ ಕಶ್ಚಿತ್ ಸುಹೃತ್ ಸ್ವಯಂ ಸರ್ವಂ ನ ಸ್ವತೋ ಭಿನ್ನಂ ಕಿಂಚಿದಿತಿ ನ ಕಸ್ಯಾಪಿ ಕಶ್ಚಿನ್ನಿಹನ್ತಾ ನಿಹನ್ತುಂ ಯೋಗ್ಯೋ ವಾ ಭವಿತುಮರ್ಹತಿ ಇತ್ಯುಪದಿಷ್ಟಮ್. ಅತ್ರ ಹಿ ಕವಿನಿಬದ್ಧೋ ಭಗವದರ್ಜುನಸಂವಾದಸ್ತತ್ಪ್ರೌಢೋಕ್ತಿಃ ಗಾಂಡೀವಂ ಸ್ರಂಸತೇ ಹಸ್ತಾತ್ ತ್ವಕ್ ಚೈವ ಪರಿದಹ್ಯತೇ. ನಿಹತ್ಯ ಧಾರ್ತರಾಷ್ಟ್ರಾನ್ನಃ ಕಾ ಪ್ರೀತಿಃ ಸ್ಯಾಜ್ಜನಾರ್ದನ, ಪಾಪಮೇವಾಶ್ರಯೇಸ್ಮಾನ್ ಹತ್ವೈತಾನ್ ಆತತಾಯಿನಃ ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸ್ಥಿತಮ್. ಅಶೋಚ್ಯಾನ್ ಅನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ಇತ್ಯಾದಿರೂಪಾ ಏತನ್ಮೂಲಕೇನ ಸುಹೃದಾಮಪಕಾರಿಣಾಮಪಿ ಹನನಂ ನಾತ್ಮನಃ ಕದಾಪಿ ಹನನಂ ಸಂಭವತಿ ತನ್ನಿಮಿತ್ತನಿಬನ್ಧನಃ ಶೋಕೋಪಿ ಅಕಿಂಚಿತ್ಕರ ಏವ. ಕಿತು ವಸ್ತುತಃ ಸುಕೃತಸಾಧನಸಂಪತ್ತ್ವರೂಪಸ್ಯ ಸ್ವಾಗಾದೇರಪಿ ತಾನಿ ಹೇತುಃ ಇತ್ಯನೇನಾಭಿಧಾನರೂಪೇಣ ವಸ್ತುನಾ ಸುಹೃದ್ವಿಯೋಗಕಾರಣೀಭೂತಪ್ರೇಮಸ್ನೇಹಾನ್ಯತರನಿಬನ್ಧನೋ ದುಃಸಹತಯಾ ಪರಿಣಾಮೀ ಶೋಕಃ ಕಾರಣಮಿತಿ ಕೇವಲಂ ಯಾವದಜ್ಞಾನಮಿತಿ ವಸ್ತು ಪ್ರಬಂಧಪ್ರಕಾಶ್ಯಮಭಿವ್ಯಜ್ಯತೇ. (ಇಲ್ಲಿ ಕೆಲವೆಡೆ ವಾಕ್ಯಾನ್ವಯ ಸರಿಯಾಗಿ ಆಗುವುದಿಲ್ಲ.) **ರುಚಿರಾ ವ್ಯಾಖ್ಯಾ ಪುಟ ೩೫೫**

೮. ನಾಯಂ ಹಂತಿ ನ ಹನ್ಯತೇ ...ಮಯ್ಯೈವೇತೇ ನಿಹತಾಃ ಪೂರ್ವಮೇವ, ಇತ್ಯಾದಿ ಭಾಗಗಳನ್ನು ಗಮನಿಸಬಹುದು.

೯. ವಸ್ತುನಾಲಂಕಾರಧ್ವನಿರ್ಯಥಾ ಮಹಾಭಾರತೇ ಗಜಗ್ರಾಹಕಥಾಪ್ರಸ್ತಾವನಾಯಾಂ ತತ್ರ ಹಿ ದೇವಲಶಾಪೇನ ಗಂಧರ್ವರಾಜೌ ಗ್ರಹೌ ಗ್ರಾಹಶ್ಚ ಬಭೂವತುಃ. ಇತ್ಯನೇನ ಭೀಷ್ಮ ಪ್ರೌಢೋಕ್ತಿಸಿದ್ಧೇನ ಮಹಾತ್ಮನಾಂ ಕಥಮಪಿ ಅವಜ್ಞಾತಾ ನ ಕಥಾಚಿತ್ ಸುಖಮೇಧತೇ. ಯಥಾ ಗನ್ಧರ್ವರಾಜೌ ಇತ್ಯುಪಮಾಭಿವ್ಯಜ್ಯತೇ. (ಅಲ್ಲೇ)

೧೦. ಅಲಂಕಾರೇಣ ವಸ್ತುಧ್ವನಿರ್ಯಥಾ ತತ್ರೈವ ಮೂಷಿಕಗಾಥಾಪ್ರಸ್ತಾವೇ. ಅತ್ರ ಹಿ ಯುಧಿಷ್ಠಿರೇಣ ಲಘುರ್ಮಹತ್‌ಪದಂ ಪ್ರಾಪ್ಯ ಕಿಮಿವ ಭವತೀತಿ ಪೃಷ್ಟೇನ ಭೀಷ್ಮೇಣ ಕಸ್ಯಾಪಿ ಮುನೇರ್ಮೂಷಿಕ ಆಸೀತ್ ಪ್ರಸಾದಭಾಜನಂ, ಸಚ ತಸ್ಯ ಕೃಪಯಾ ಸಿಂಹೋ ಬಭೂವ, ಭೂತ್ವಾ ಪುನಃ ಸಿಂಹಃ ಕೋಪೇನ ತಸ್ಯೈವ ಮೂಷಕ ಏವ ಜಾತ ಇತಿ ಯಥಾ ಮೂಷಕಃ ಸಿಂಹೋಪಿ

ಭೂತ್ವಾ ಮೂಷಕ ಏವಾಸೀತ್ತಥಾ ಲಘುರಪಿ ಮಹತ್ ಪದಂ ಪ್ರಾಪ್ತೋಽವಹೇಲಿತಃ ಪುನರ್ಲಘುತಾಮೇವ ಪ್ರತಿಪದ್ಯತೇ. ಇತ್ಯುಪಮಯಾ ಮಹಾನೇವ ಮಹಾನ್ ಭವಿತುಮರ್ಹತೀತಿ, ಲಘುಃ ಕದಾಚಿತ್ ತಥಾ ಭವೇದಪಿ ಕಿನ್ತು ಪುನಃ ಪತತೀತಿ ಸರ್ವಥಾ ಪ್ರಮಾದಾದ್ಯವದ್ಯಜಾತಂ ಪರಿಹಾತವ್ಯಮಿತಿ ವಸ್ತು ವ್ಯಜ್ಯತೇ.

೧೧. **ವ್ಯಂಗ್ಯವ್ಯಂಜಕಭಾವೇಽಸ್ಮಿನ್ ವಿವಿಧೇ ಸಂಭವತ್ಯಪಿ ರಸಾದಿಮಯ ಏಕಸ್ಮಿನ್ ಕವಿಃ ಸ್ಯಾದವಧಾನವಾನ್** ಕವಿರಪೂರ್ವಲಾಭಾರ್ಥೇ ರಸಾದಿಮಯ ಏವಾಸ್ಮಿನ್ ವ್ಯಂಗ್ಯವ್ಯಂಜಕಭಾವೇ ಯತ್ನಾದವದಧೀತ. ರಸಾಭಾವತದಾಭಾಸರೂಪೇ ವ್ಯಂಗ್ಯೇ ತದ್ವ್ಯಂಜಕೇಷು ಚ ಯಥಾಮತಿ ನಿರ್ದಿಷ್ಟೇಷು ವರ್ಣಪದವಾಕ್ಯರಚನಾಪ್ರಬಂಧೇಷ್ವವಹಿತಮನಸಃ ಕವೇಃ ಸರ್ವಮಪೂರ್ವಂ ಕಾವ್ಯಂ ಸಂಪದ್ಯತೇ. ತಥಾ ಚ ರಾಮಾಯಣಮಹಾಭಾರತಾದಿಷು ಸಂಗ್ರಾಮಾದಯಃ ಪುನಃ ಪುನರಭಿಹಿತಾ ಅಪಿ ನವನವಾಃ ಪ್ರಕಾಶಂತೇ. ಪ್ರಬಂಧೇ ಚಾಂಗೀ ರಸ ಏಕ ಏವೋಪನಿಪದ್ಯಮಾನೋಽರ್ಥವಿಶ್ಲೇಷಲಾಭಂ ಛಾಯಾತಿಶಯಂ ಚ ಪುಷ್ಣಾತಿ, ಕಸ್ಮಿನ್ನಿವೇತಿ ಚೇತ್ ಯಥಾ ರಾಮಾಯಣೇ ಯಥಾ ವಾ ಮಹಾಭಾರತೇ ... ಮಹಾಭಾರತೇಽಪಿ ಶಾಸ್ತ್ರಕಾವ್ಯರೂಪಚ್ಛಾಯಾನ್ವಯಿನಿ ವೃಷ್ಣಿಪಾಂಡವವಿರಸಾವಸಾನವೈಮನಸ್ಯದಾಯಿನೀಂ ಸಮಾಪ್ತಿಮುಪನಿಬಧ್ನತಾ ಮಹಾಮುನಿನಾ ವೈರಾಗ್ಯಜನನತಾತ್ಪರ್ಯಂ ಪ್ರಾಧಾನ್ಯೇನ ಸ್ವಪ್ರಬನ್ಧಸ್ಯ ದರ್ಶಯತಾ ಮೋಕ್ಷಲಕ್ಷಣಃ ಪುರುಷಾರ್ಥಃ ಶಾಂತೋ ರಸಶ್ಚ ಮುಖ್ಯತಯಾ ವಿವಕ್ಷಾವಿಷಯತ್ವೇನ ಸೂಚಿತಃ. ಏತಚ್ಚಾಂಶೇನ ವಿವೃತಮೇವಾನ್ಯೈ ರ್ವ್ಯಾಖ್ಯಾವಿಧಾಯಿಭಿಃ. ಸ್ವಯಂ ಚೋದ್ಗೀರ್ಣಂ ತೇನೋದೀರ್ಣಮಹಾಮೋಹಮಗ್ನಮುಜ್ಜಿಹೀರ್ಷತಾ ಲೋಕಮತಿವಿಮಲಜ್ಞಾನಾಲೋಕದಾಯಿನಾ ಲೋಕನಾಥೇನ **ಯಥಾ ಯಥಾ ವಿಪರ್ಯೇತಿ ಲೋಕತಂತ್ರಮಸಾರವತ್ ತಥಾ ತಥಾ ವಿರಾಗೋತ್ರ ಜಾಯತೇ ನಾತ್ರ ಸಂಶಯಃ**. ಇತ್ಯಾದಿ ಬಹುಶಃ ಕಥಯತಾ. ಪುಟ ೬೧೩ ತತಶ್ಚ ನಾನ್ತೋ ರಸೋ ರಸಾನ್ತರೈಃ ಮೋಕ್ಷಲಕ್ಷಣಃ ಪುರುಷಾರ್ಥಃ ಪುರುಷಾರ್ಥಾಂತರೈಸ್ತದುಪಸರ್ಜನತ್ವೇನಾನುಗಮ್ಯಮಾನೋಽಙ್ಗಿತ್ವೇನ ವಿವಕ್ಷಾವಿಷಯ ಇತಿ ಮಹಾಭಾರತತಾತ್ಪರ್ಯಂ ಸುವ್ಯಕ್ತಮೇವಾವಭಾಸತೇ ... ಪಾರಮಾರ್ಥಿಕಾಂರಸ್ತತ್ತ್ವಾನಪೇಕ್ಷಯಾ ಶರೀರಸ್ಯೇವಾಂಗಭೂತಸ್ಯ ರಸಸ್ಯ ಪುರುಷಾರ್ಥಸ್ಯ ಚ ಸ್ವಪ್ರಧಾನ್ಯೇನ ಚಾರುತ್ವಮಪ್ಯವಿರುದ್ಧಮ್.

ನನು ಮಹಾಭಾರತೇ ಯಾವಾನ್ ವಿವಕ್ಷಾವಿಷಯಃ, ಸೋಽನುಕ್ರಮಣ್ಯಾಂ ಸರ್ವ ಏವಾನುಕ್ರಾನ್ತೋ ನ ಚೈತತ್ ತತ್ರ ದೃಶ್ಯತೇ ಪ್ರತ್ಯುತ ಸರ್ವಪುರುಷಾರ್ಥಪ್ರಬೋಧಹೇತುತ್ವಂ ಸರ್ವರಸಗರ್ಭತ್ವಂ ಚ ಮಹಾಭಾರತಸ್ಯ ತಸ್ಮಿನ್ನುದ್ದೇಶೇ ಸ್ವಶಬ್ದನಿವೇದಿತತ್ವೇನ ಪ್ರತೀಯತ್ತೇ ಅತ್ರೋಚ್ಯತೇ ಸತ್ಯಂ, ಶಾಂತಸ್ಯೈವ ರಸಸ್ಯ ಅಂಗಿತ್ವಂ, ಮಹಾಭಾರತೇ ಮೋಕ್ಷಸ್ಯ ಚ ಸರ್ವಪುರುಷಾರ್ಥೇಭ್ಯಃ ಪ್ರಾಧಾನ್ಯಂ ಇತ್ಯೇತನ್ನ ಸ್ವಶಬ್ದಾಭಿಧೇಯತ್ವೇನ ಅನುಕ್ರಮಣ್ಯಾಂ ದರ್ಶಿತಂ ಕಿನ್ತು ವ್ಯಂಗ್ಯತ್ವೇನ. **ಭಗವಾನ್ ವಾಸುದೇವಶ್ಚ ಕೀರ್ತ್ಯತೇತ್ರ ಸನಾತನಃ** ಇತ್ಯೇತಸ್ಮಿನ್ ವಾಕ್ಯೇ ಹ್ಯಯಮರ್ಥೋ ವ್ಯಂಗ್ಯತ್ವೇನ ವಿವಕ್ಷಿತೋ ಯದತ್ರ ಮಹಾಭಾರತೇ ಪಾಂಡವಾದಿಚರಿತಂ ಯತ್ ಕೀರ್ತ್ಯತೇ ತಸ್ಮಾತ್ ತಸ್ಮಿನ್ನೇವ ಪರಮೇಶ್ವರೇ ಭಗವತಿ ಭವತ, ಭಾವಿತಚೇತಸೋ ಮಾ ಭೂತ ವಿಭೂತಿಷು ನಿಃಸಾರಾಸು ರಾಗಿಣೋ ಗುಣೇಶು ವಾ ನಯವಿನಯಪರಾಕ್ರಮಾದಿಷ್ವಮೀಷು ಕೇವಲೇಷು ಕೇಷುಚಿತ್ ಸರ್ವಾತ್ಮನಾ ಪ್ರತಿನಿವಿಷ್ಟಧಿಯಃ ತಥಾ ಚಾಗ್ರೇ ಪಶ್ಯತ ನಿಃ ಸಾರತಾಂ ಸಂಸಾರಸ್ಯ ಇತ್ಯಮುಮೇವಾರ್ಥಂ ದ್ಯೋತಯದ್ ಸ್ಫುಟಮೇವಾವಭಾಸತೇ. ವ್ಯಂಜಕಶಕ್ತ್ಯಾನುಗೃಹೀತಶ್ಚ ಶಬ್ದಃ. ಏವಂವಿಧಮೇವ ಚಾರ್ಥಂ ಗರ್ಭೀಕೃತಂ

ಸಂದರ್ಶಯನ್ತೋನನ್ತರಾಃ ಶ್ಲೋಕಾ ದೃಶ್ಯನ್ತೇ. ಸ ಹಿ ಸತ್ಯಮ್ ಇತ್ಯಾದಯಃ. ಸಹಿ ಸತ್ಯಮೃತಂ ಚೈವ ಪವಿತ್ರಂ ಪುಣ್ಯಮೇವ ಚ. ಶಾಶ್ವತಂ ಬ್ರಹ್ಮ ಪರಮಂ ಧ್ರುವಂ ಜ್ಯೋತಿಃ ಸನಾತನಮ್ ಅಯಂ ಚ ನಿಗೂಢರಮಣೀಯಾರ್ಥೋ ಮಹಾಭಾರತಾವಸಾನೇ ಹರಿವಂಶವರ್ಣನೇನ ಸಮಾಪ್ತಿಂ ವಿದಧತಾ ಕವಿವೇಧಸಾ ಕೃಷ್ಣದ್ವೈಪಾಯನೇನ ಸಮ್ಯಕ್ ಸ್ಫುಟೀಕೃತಃ. ಅನೇನ ಚಾರ್ಥೇನ ಸಂಸಾರಾತೀತೇ ತತ್ತ್ವಾನ್ತರೇ ಭಕ್ತ್ಯತಿಶಯಂ ಪ್ರವರ್ತಯತಾ ಸಕಲ ಏವ ಸಾಂಸಾರಿಕೋ ವ್ಯವಹಾರಃ ಪೂರ್ವಪಕ್ಷೀಕೃತೋಧ್ಯಕ್ಷೇಣ ಪ್ರಕಾಶತೇ. ದೇವತಾ ತೀರ್ಥತಪಃಪ್ರಭೃತೀನಾಂ ಚ ಪ್ರಭಾವಾತಿಶಯವರ್ಣನಂ ತಸ್ಯೈವ ಪರಬ್ರಹ್ಮಣಃ ಪ್ರಾಪ್ತ್ಯುಪಾಯತ್ವೇನ ತತ್ತದ್ವಭೂತಿತ್ವೇನೈವ ವಾ ದೇವತಾ ವಿಶೇಷಾಣಾಮನ್ಯೇಷಾಂ ಪಾಂಡವಾದಿಚರಿತವರ್ಣನಸ್ಯಾಪಿ ವೈರಾಗ್ಯಜನನತಾತ್ಪರ್ಯಾದ್ ವೈರಾಗ್ಯ ಸ್ಯ ಚ ಮೋಕ್ಷ ಮೂಲತ್ವಾದ್. ಮೋಕ್ಷಸ್ಯ ಚ ಭಗವತ್ಪ್ರಾಪ್ತ್ಯುಪಾಯತ್ವೇನ ಮುಖ್ಯತಯಾ ಗೀತಾದಿಷು ಪ್ರದರ್ಶಿತತ್ವಾತ್ ಪರಬ್ರಹ್ಮ ಪ್ರಾಪ್ತ್ಯುಪಾಯುತ್ವಮೇವ. ಪರಂಪರಯಾ ವಾಸುದೇವಸಂಜ್ಞಾಭಿಧೇಯತ್ವೇನ ಚಾಪರಿಮಿತಶಕ್ತ್ಯಾಸ್ಪದಂ ಪರಂ ಬ್ರಹ್ಮ ಗೀತಾದಿ ಪ್ರದೇಶಾಂತರೇಷು ತದಭಿಧಾನತ್ವೇನ ಲಬ್ಧಪ್ರಸಿದ್ಧಿ ಮಾಥುರಪ್ರಾಧುರ್ಭಾವಾನುಕೃತಸಕಲಸ್ವರೂಪಶಂಸಿ ರೂಪಂ ವಿವಕ್ಷಿತಂ, ನ ತು ಮಾಥುರಪ್ರಾದುರ್ಭಾವಾಂಶ ಏವ, ಸನಾತನಶಬ್ದವಿಶೇಷಿತತ್ವಾತ್. ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ. ಗೀತಾ ತದೇವಮನುಕ್ರಮಣೀನಿರ್ದಿಷ್ಟೇನ ವಾಕ್ಯೇನ ಭಗವದ್ವ್ಯತಿರೇಕಿಣಃ ಸರ್ವಸ್ಯಾನ್ಯಸ್ಯಾನಿತ್ಯತಾಂ ಪ್ರಕಾಶಯತೋ ಮೋಕ್ಷಲಕ್ಷಣ ಏವೈಕಃ ಪರಃ ಪುರುಷಾರ್ಥಃ ಶಾಸ್ತ್ರನಯೇ. ಕಾವ್ಯನಯೇ ಚ ತೃಷ್ಣಾಕ್ಷಯಸುಖಪರಿಪೋಷಲಕ್ಷಣಃ ಶಾನ್ತೋ ರಸೋ ಮಹಾಭಾರತಸ್ಯಾಂಗಿನೋ ವಿವಕ್ಷಿತ ಇತಿ ಸುಪ್ರತಿಪಾದಿತಮ್. ಪುಟ ೬೨೨

೧೨. ಪರ್ಯಾಯೋಕ್ತಂ ಯದನ್ಯಸ್ಯ ಪ್ರಕಾರೇಣಾಭಿಧೀಯತೇ ಉವಾಚ ರತ್ನಾಹರಣೇ ಚೈದ್ಯಂ ಶಾರ್ಙ್ಗಧನುರ್ಯಥಾ ಗೃಹೇಷ್ವಧ್ವಸು ವಾ ನಾನ್ನಂ ಭುಂಜ್ಮ ಹೇ ಯದಧೀತಿನಃ ನ ಭುಂಜತೇ ದ್ವಿಜಾಸ್ತಚ್ಚ ರಸದಾನನಿವೃತ್ತಯೇ **ಭಾಮಹ ಕಾವ್ಯಾಲಂಕಾರ ೩.೮, ೯**

೧೩. ಕನ್ನಡ ಕಾವ್ಯಾಲಂಕಾರ, ಪೀಠಿಕೆ ಪುಟಗಳು ೧೬, ೧೭

೧೪. ಪಾಂಡೋರ್ನಂದನ ನಂದನಂ ವನಮಿದಂ ಸಂಕಲ್ಪಜೈಃ ಸೀಧುಭಿಃ ಕ್ಲೃಪ್ತಾ ಪಾನಕಕೇಲಿಕಲ್ಪತರುಷು ದ್ವಂದ್ವೈಃ ಸುಧಾಲೇಹಿನಾಮ್ ಅಪ್ಸರೋನ್ನು ಶಿಲಾಲವಾಲವಲಯಂ ಸಂತಾನಕಾನಾಂ ತಲೇ ಜ್ಯೋತ್ಸ್ನಾ ಸಂಗಲದಚ್ಛನಿರ್ಝರಜಲೈರ್ಯತ್ನಂ ವಿನಾ ಪೂರ್ಯತೇ **ಕಾವ್ಯಮೀಮಾಂಸಾ ಪುಟ. ೯೦**

೧೫. ಆಸ್ತಕೋಸ್ತಿ ಮುನಿಃ ಸ್ಮ ವಿಸ್ಮಯಕೃತಃ ಪಾರೀಕ್ಷಿತೀಯಾನ್ ಮುಖಾಂ ಸ್ತ್ರಾತಾ ತಕ್ಷಕಲಕ್ಷ್ಮಣಃ ಫಣಭೃತಾಂ ವಂಶಸ್ಯ ಶಕ್ರಸ್ಯ ಚ. ಉದ್ವೇಲನ್ಮಲಯಾದ್ರಿಚಂದನಲತಾಸ್ವಾಂದೋಲನಪ್ರಕ್ರಮೇ ಯಸ್ಯಾದ್ಯಾಪಿ ಸವಿಭ್ರಮಂ ಫಣಿವಧೂವೃಂದೈರ್ಯಶೋ ಗೀಯತೇ. **ಕಾವ್ಯಮೀಮಾಂಸಾ ಪುಟ ೯೪**

೧೬. ಜರಾಮೇಷ ಬಿಭರ್ಮೀತಿ ಪ್ರತಿಜ್ಞಾಯ ಪಿತುರ್ಯಥಾ ತಥೈವ ಪುರುಣಾಭಾರಿ ಸಾ ಸ್ಯಾದ್ ಧರ್ಮನಿಬಂಧನೀ ... ಭ್ರಾತುರ್ಭ್ರಾತೃವ್ಯ ಮುನ್ಮಥ್ಯ ಪಾಸ್ಯಾಮ್ಯಸ್ಯಾಸೃಗಾಸವೇ ಪ್ರತಿಜ್ಞಾಯ ಯಥಾ ಭೀಮಸ್ತಚ್ಚಕಾರಾವಶೋ ರುಷಾ. **ಕಾವ್ಯಾಲಂಕಾರ ೫. ೩೬, ೩೯.** ಪಂಚಾನಾಂ

ಪಾಂಡುಪುತ್ರಾಣಾಂ ಪತ್ನೀ ಪಾಂಚಾಲಪುತ್ರಿಕಾ ಸತೀನಾಮಗ್ರಣೀಶ್ಚಾಸೀದ್ ದೈವೋ ಹಿ ವಿಧಿರೀದೃಶಃ. **ಕಾವ್ಯಾದರ್ಶ ೩.೧೮೫**

೧೭. ಅರ್ಥಪ್ರತಿಜ್ಞೆಗೆ ಹಾಗೂ ಕಾಮಪ್ರತಿಜ್ಞೆಗೆ ಭಾಮಹನು ಕ್ರಮವಾಗಿ ಉದಾಹರಿಸುವುದು ಸೀತಾನ್ವೇಷಣೆ ಹಾಗೂ ಉದಯನನ ಕಥೆಗಳನ್ನು.

೧೮. ಕಾರ್ಯೋರ್ನ್ಯತ್ರ ಪ್ರತಿಜ್ಞಾಯಾಃ ಪ್ರಯೋಗೋ ನ ಕಥಂಚನ ಪರಿತ್ಯಾಗಸ್ಯ ಕರ್ತವ್ಯೋ ವಾಸಾಂ ಚತಸ್ಪೃಣಾಮಪಿ. ಪ್ರಯೋಪವೇಶಾಯ ಯಥಾ ಪ್ರತಿಜ್ಞಾಯ ಸುಯೋಧನಃ ರಾಜ್ಯಾಯ ಪುನರುತ್ತಸ್ಥಾವಿತಿ ಧರ್ಮವಿರೋಧಿನೀ, ಅಹೂತೋ ನ ನಿವರ್ತೇಹಂ ದ್ಯೂತಾಯೇತಿ ಯುಧಿಷ್ಠಿರಃ ಕೃತ್ವಾ ಸಂಧಾಂ ಶಕುನಿನಾ ದಿದೇವೇತ್ಯರ್ಥಬಾಧಿನೀ ಅದ್ಯಾರಭ್ಯ ನಿವತ್ಸ್ಯಾಮಿ ಮುನಿವದ್ ವಚನಾದಿತಿ ಪಿತುಃ ಪ್ರಿಯಾಯಯಾಂ ಭೀಷ್ಮಶ್ಚಕ್ರೇ ಸಾ ಕಾಮಬಾಧಿನೀ **ಭಾಮಹನ ಕಾವ್ಯಾಲಂಕಾರ ೫, ೩೫, ೪೪**

೧೯. ಭಾಸ್ಕರಸೂನಾವಸ್ತಂ ಯಾತೇ ಜಾತೇ ಚ ಪಾಂಡವೋತ್ಕರ್ಷೇ ದುರ್ಯೋಧನಸ್ಯ ಜೀವಿತ ಕಥಮಿವ ನಾದ್ಯಾಪಿ ನಿರ್ಯಾಸಿ. **ರಸಗಂಗಾಧರ, ಪುಟ ೧೧೨**

೨೦. ವ್ಯಾನಮ್ರಾಶ್ಚಲಿತಾಶ್ಚೈವ ಸ್ಫಾರಿತಾಃ ಪರಮಾಕುಲಾಃ ಪಾಂಡುಪುತ್ರೇಷು ಪಾಂಚಾಲ್ಯಾಃ ಪತನ್ತಿ ಪ್ರಥಮಾ ದೃಶಃ. **ಅಲ್ಲೇ ಪುಟ ೧೨೨**

೨೧. ರಾಜಾ ಯುಧಿಷ್ಠಿರೋ ನಾ ಸರ್ವಧರ್ಮಸಮಾಶ್ರಯಃ ದ್ರುಮಾಣಾಮಿವ ಲೋಕಾನಾಂ ಮಧುಮಾಸ ಇವಾಭವತ್. **ಅಲ್ಲೇ ಪುಟ ೨೪೩.**

೨೨. ದೋರ್ದಂಡದ್ವಯಕುಂಡಲೀಕೃತಲಸತ್ಕೋದಂಡಚಂಡಧ್ವನಿ ಧ್ವಸ್ತೋದ್ದಂಡವಿಪಕ್ಷ ಮಂಡಲಮಥ ತ್ವಾಂ ವೀಕ್ಷ್ಯ ಮಧ್ಯೇರಣಮ್ ವಲ್ಗದ್ಗಾಂಡೀವಮುಕ್ತಕಾಂಡವಲಯ ಜ್ವಾಲಾವಲೀ ತಾಂಡವಭ್ರಶ್ಯತ್ಖಾಂಡವರುಷ್ಟಪಾಂಡವಮಹೋ ಕೋ ನ ಕ್ಷಿತೀಶಃ ಸ್ಮರೇತ್. **ಅಲ್ಲೇ ಪುಟ ೨೮೬.**

೨೩. ಪ್ರಾಯಃ ಪತೇದ್ ದ್ಯೌಃ ಶಕಲೀಭವೇದ್ ಗ್ಲೌಃ ಸಹಾಚಲೈರಂಬುಧಿಭಿಃ ಸ್ಖಲೇದ್ ಗೌಃ. ನೂನಂ ಜ್ವಲಿಷ್ಯಂತಿ ದಿಶಃ ಸಮಸ್ತಾ ಯದ್ ದ್ರೌಪದೀ ರೋದಿತಿ ಹಾ ಹತೇತಿ. **ಅಲ್ಲೇ, ಪುಟ ೩೭೬.**

೨೪. ವಕ್ರೋಕ್ತಿಜೀವಿತ, ಕುಂತಕ. **ಕರ್ನಾಟಕ ವಿಶ್ವವಿದ್ಯಾನಿಲಯ ಪ್ರಕಟಣೆ. ಪುಟ ೨೭೬.**

*

jagannathas1956@gmail.com
9972016425